# ಮೈಸೂರು ವಿಶ್ವವಿದ್ಯಾನಿಲಯ

ದಿನಾಂಕ 28-05-2021ರ ಶುಕ್ರವಾರದಂದು ಪೂರ್ವಾಹ್ನ 11.00 ಗಂಟೆಗೆ ಮೈಸೂರು ವಿಶ್ವವಿದ್ಯಾನಿಲಯದ ವಿಜ್ಞಾನ ಭವನ, ಮಾನಸಗಂಗೋತ್ರಿ, ಮೈಸೂರು ಇಲ್ಲಿ ನಡೆದ ನಾಲ್ಕನೇ ಸಾಮಾನ್ಯ ಸಿಂಡಿಕೇಟ್ ಸಭೆಯ ನಡಾವಳಿ.

**ಹಾಜರಿದ್ದ ಸದಸ್ಯರುಗಳು:**

| | |
|---|---|
| 1. ಪ್ರೊ. ಜಿ.ಹೇಮಂತಕುಮಾರ್ | ಕುಲಪತಿಗಳು ಹಾಗೂ ಅಧ್ಯಕ್ಷರು |
| 2. ಆಯುಕ್ತರು, ಕಾಲೇಜು ಶಿಕ್ಷಣ ಇಲಾಖೆ, ಕರ್ನಾಟಕ ಸರ್ಕಾರ ಇವರ ಪರವಾಗಿ ಜಂಟಿ ನಿರ್ದೇಶಕರು, ಕಾಲೇಜು ಶಿಕ್ಷಣ ಇಲಾಖೆ, ಪ್ರಾದೇಶಿಕ ಕಛೇರಿ, ಮೈಸೂರು. | ಸದಸ್ಯರು |
| 3. ಪ್ರೊ. ಜಿ.ವೆಂಕಟೇಶ್ ಕುಮಾರ್ | ಸದಸ್ಯರು |
| 4. ಶ್ರೀ ಎಂ.ಬಿ. ಗಪ್ಪಣ್ಣ | ಸದಸ್ಯರು |
| 5. ಡಾ. ಚೈತ್ರ ನಾರಾಯಣ | ಸದಸ್ಯರು |
| 6. ಶ್ರೀ ಕುಮಾರ | ಸದಸ್ಯರು |
| 7. ಶ್ರೀಮತಿ ಕೆ.ನಾಗರತ್ನಮ್ಮ | ಸದಸ್ಯರು |
| 8. ಡಾ. ಬಿ.ರಾಜಣ್ಣ | ಸದಸ್ಯರು |
| 9. ಡಾ. ವೆಂಕಟೇಶ್ ಜೆ ಎನ್ | ಸದಸ್ಯರು |
| 10. ಶ್ರೀ. ಆರ್.ಪ್ರದೀಪ್‌ಕುಮಾರ್ ದೀಕ್ಷಿತ್ | ಸದಸ್ಯರು |
| 11. ಶ್ರೀ ಎಸ್.ಡಿ.ದೊಡ್ಡಚಾರಿ | ಸದಸ್ಯರು |
| 12. ಶ್ರೀಮತಿ ವೈ.ಕೆ.ಪವಿತ್ರ | ಸದಸ್ಯರು |
| 13. ಡಾ. ಈ.ಸಿ.ನಿಂಗರಾಜ್‌ಗೌಡ | ಸದಸ್ಯರು |
| 14. ಡಾ. ಎಂ.ಎಸ್.ದಾಮೋದರ | ಸದಸ್ಯರು |
| 15. ಡಾ. ಸೈಯದ್ ಕಾರ್‍ಝು ಮೊಹಿದ್ದೀನ್, ಬೆಂಗಳೂರು (ವರ್ಚುಯಲ್ ಮೋಡ್‌ನಲ್ಲಿ ಹಾಜರಾಗಿರುತ್ತಾರೆ) | ಸದಸ್ಯರು |
| 16. ಪ್ರೊ. ಎ.ಪಿ.ಜ್ಞಾನ ಪ್ರಕಾಶ್, ಕುಲಸಚಿವರು (ಪರೀಕ್ಷಾಂಗ) | ಸದಸ್ಯರು |
| 17. ಪ್ರೊ. ಟಿ.ಎಸ್.ದೇವರಾಜ, ಹಣಕಾಸು ಅಧಿಕಾರಿಗಳು | ಸದಸ್ಯರು |
| 18. ಪ್ರೊ. ಆರ್.ಶಿವಪ್ಪ | ಕುಲಸಚಿವರು ಹಾಗೂ ಸದಸ್ಯ ಕಾರ್ಯದರ್ಶಿ |

**ಹಾಜರಾಗದ ಸದಸ್ಯರು:**

1. ನಿರ್ದೇಶಕರು, ತಾಂತ್ರಿಕ ಶಿಕ್ಷಣ ಇಲಾಖೆ, ಕರ್ನಾಟಕ ಸರ್ಕಾರ.
2. ನಿರ್ದೇಶಕರು, ವೈದ್ಯಕೀಯ ಶಿಕ್ಷಣ ಇಲಾಖೆ, ಕರ್ನಾಟಕ ಸರ್ಕಾರ.
3. ಆಯುಕ್ತರು, ಸಾರ್ವಜನಿಕ ಶಿಕ್ಷಣ ಇಲಾಖೆ, ಕರ್ನಾಟಕ ಸರ್ಕಾರ.
4. ನಿರ್ದೇಶಕರು, ಪದವಿಪೂರ್ವ ಶಿಕ್ಷಣ ಇಲಾಖೆ, ಕರ್ನಾಟಕ ಸರ್ಕಾರ.

ಕುಲಸಚಿವರು, ಮೈಸೂರು ವಿಶ್ವವಿದ್ಯಾನಿಲಯ, ಮೈಸೂರು ಇವರು ಸಭೆಗೆ ಹಾಜರಿದ್ದ ಸದಸ್ಯರುಗಳನ್ನು ಹೃತ್ಪೂರ್ವಕವಾಗಿ ಸಭೆಗೆ ಸ್ವಾಗತಿಸಿದರು.

ಮೊದಲಿಗೆ ಇತ್ತೀಚೆಗೆ ನಿಧನರಾದ ಶ್ರೀ ಲಯನ್ ಹೆಚ್.ರಮೇಶ್, ಮಾಜಿ ಸಿಂಡಿಕೇಟ್ ಸದಸ್ಯರು, ಮೈಸೂರು ವಿಶ್ವವಿದ್ಯಾನಿಲಯ, ಮೈಸೂರು, ಡಾ.ಪಿ.ಸೆಲ್ವಿದಾಸ್, ಮಾಜಿ ಕುಲಪತಿಗಳು, ಮೈಸೂರು ವಿಶ್ವವಿದ್ಯಾನಿಲಯ, ಮೈಸೂರು, ಶ್ರೀ ಹೆಚ್.ಎಸ್.ದೊರೆಸ್ವಾಮಿ, ಹಿರಿಯ ಸ್ವಾತಂತ್ರ ಹೋರಾಟಗಾರರು,

ಶ್ರೀ ಪ್ರಭು, ಶ್ರೀ ರವಿಕಿರಣ್, ಕಾನೂನು ಸಲಹೆಗಾರರು, ಮೈಸೂರು ವಿಶ್ವವಿದ್ಯಾನಿಲಯ, ಮೈಸೂರು, ಪ್ರೊ. ನಿಂಗಯ್ಯ, ಪ್ರೊ. ಚಂದ್ರಶೇಖರ್ ಗೌಡ, ಭೂವಿಜ್ಞಾನ ಅಧ್ಯಯನ ವಿಭಾಗ, ಮಾನಸಗಂಗೋತ್ರಿ, ಮೈಸೂರು. ಹಾಗೆಯೇ ಶ್ರೀ ಮಂಜೇಗೌಡ ಹಾಗೂ ಕೆಲವು ಅತಿಥಿ ಅಧ್ಯಾಪಕರು ಮತ್ತು ಅಧ್ಯಾಪಕೇತರರು, ತಾತ್ಕಾಲಿಕ ನೌಕರರು, ಇವರ ಸಂಬಂಧಿಗಳು ನಿಧನರಾದ ಪ್ರಯುಕ್ತ ಮೃತರೆಲ್ಲರ ಗೌರವಾರ್ಥ ಎರಡು ನಿಮಿಷಗಳ ಕಾಲ ಮೌನವನ್ನಾಚರಿಸಲಾಯಿತು.

ತದನಂತರ, ಮಾನ್ಯ ಕುಲಪತಿಗಳು ಸಭೆಗೆ ಆಗಮಿಸಿದ್ದ ಎಲ್ಲಾ ಸದಸ್ಯರುಗಳನ್ನು ಸ್ವಾಗತಿಸಿ, ಕಾರ್ಯಸೂಚಿಯಲ್ಲಿನ ವಿಷಯಗಳನ್ನು ಸಭೆಯಲ್ಲಿ ಮಂಡಿಸಿದರು.

| ವಿಷಯ ಸಂಖ್ಯೆ | **ವಿಷಯ ಸಂಕ್ಷಿಪ್ತವಾಗಿ** |
|---|---|
| | ದಿನಾಂಕ 25-3-2021 ರಂದು ಜರುಗಿದ ಮೂರನೇ ಸಾಮಾನ್ಯ ಸಿಂಡಿಕೇಟಿನ ಸಭೆಯ ನಡವಳಿಯನ್ನು ಮತ್ತು Action taken Report ನ್ನು ದೃಢೀಕರಿಸುವ ಬಗ್ಗೆ. |
| **ತೀರ್ಮಾನ** | ದಿನಾಂಕ 25-3-2021 ರಂದು ಜರುಗಿದ ಮೂರನೇ ಸಾಮಾನ್ಯ ಸಿಂಡಿಕೇಟಿನ ಸಭೆಯ ನಡವಳಿಯನ್ನು **ದೃಢೀಕರಿಸಲಾಯಿತು** ಮತ್ತು ಕೈಗೊಂಡ ಕ್ರಮದ ಬಗೆಗಿನ ವರದಿಯನ್ನು ಗಮನಿಸಲಾಯಿತು. |
| 2021/5.1 | ತಾತ್ಕಾಲಿಕ ಸಹಾಯಕ ಪ್ರಾಧ್ಯಾಪಕರುಗಳನ್ನು ನೇಮಕ ಮಾಡಿರುವ ಬಗ್ಗೆ. |
| | ತಾತ್ಕಾಲಿಕ ಸಹಾಯಕ ಪ್ರಾಧ್ಯಾಪಕರುಗಳನ್ನು ನೇಮಕ ಮಾಡುವ ಬಗ್ಗೆ ಸಭೆಯು ಈ ಕೆಳಕಂಡಂತೆ ಸಭೆಯು ಕೂಲಂಕುಷವಾಗಿ ಚರ್ಚಿಸಿತು.<br>1. ಮಾನ್ಯ ಕುಲಪತಿಯವರು ಮಾತನಾಡಿ ತಾತ್ಕಾಲಿಕ ಸಹಾಯಕ ಪ್ರಾಧ್ಯಾಪಕರುಗಳನ್ನು ಎರಡು ವರ್ಷಗಳ ಅವಧಿಗೆ ಮಾಸಿಕ ವೇತನ ರೂ.50,000/- ಗಳ ವೇತನ ವನ್ನು ನಿಗದಿಪಡಿಸಿ ಪ್ರತಿ ವರ್ಷ ಎರಡು ದಿನಗಳ ಅವಧಿಗೆ ಅವರನ್ನು ಕರ್ತವ್ಯದಿಂದ ಬಿಡುಗಡೆಗೊಳಿಸಿ ಪುನರ್ ನೇಮಕ ಮಾಡಿಕೊಳ್ಳುತ್ತಿರುವ ಬಗ್ಗೆ ಸಭೆಗೆ ವಿವರಣೆ ನೀಡಿದರು. ನ್ಯಾಕ್ ನೀಡಿರುವ ಪಟ್ಟಿಯಲ್ಲಿ ಪೂರ್ಣ ಕಾಲಿಕ ಉಪನ್ಯಾಸಕರು ಎಂದು ತೋರಿಸಲಾಗಿದೆ ಎಂದು ತಿಳಿಸಿದರು.<br>2. ಮಾನ್ಯ ಸದಸ್ಯರಾದ ಪ್ರೊ.ವೆಂಕಟೇಶ್ ಕುಮಾರ್ ರವರು ಮಾತನಾಡಿ ಯಾವ ರೀತಿ ನೇಮಕಾತಿ ಪ್ರಕ್ರಿಯೆಯನ್ನು ಕೈಗೊಂಡಿದ್ದೀರಾ. ತಾತ್ಕಾಲಿಕ ಸಹಾಯಕ ಪ್ರಾಧ್ಯಾಪಕರುಗಳ ನೇಮಕಾತಿಗೆ ಯಾವ ಷರತ್ತುಗಳನ್ನು ವಿಧಿಸಿದ್ದೀರಿ ಹಾಗೂ ಯಾವ ವಿಧಾನವನ್ನು ಅನುಸರಿಸಲಾಯಿತು? ಹಾಗೂ ಎರಡು ವರ್ಷಗಳಿಗೆ ಮರು ಜಾಹೀರಾತು ಮೂಲಕ ನೇಮಕಾತಿ ಮಾಡಿಕೊಳ್ಳುವುದು ಸೂಕ್ತವೆಂದು ತಮ್ಮ ಅಭಿಪ್ರಾಯವನ್ನು ವ್ಯಕ್ತಪಡಿಸಿದರು. ವಿಶ್ವವಿದ್ಯಾನಿಲಯದ ಕೈಗೊಂಡಿರುವ ಕ್ರಮವು ಸರಿಯಿಲ್ಲ ಎಂದು ಹೇಳುತ್ತಿಲ್ಲ ಆದರೆ ಯಾವ ವಿಧಾನವನ್ನು ಅನುಸರಿಸಲಾಗುತ್ತಿದೆ ಎಂದು ವಿವರಣೆಯನ್ನು ಕೋರುತ್ತೇನೆಂದು ಸಭೆಗೆ ತಿಳಿಸಿದರು.<br>3. ಮಾನ್ಯ ಸದಸ್ಯರಾದ ಪ್ರೊ.ದೊಡ್ಡಚಾರಿಯವರು ಮಾತನಾಡಿ ಹೊಸದಾಗಿ ಜಾಹೀರಾತು ಮೂಲಕ ಅರ್ಜಿಯನ್ನು ಕರೆದು ನೇಮಕಾತಿ ಪ್ರಕ್ರಿಯೆ ಕೈಗೊಳ್ಳಲು ಕೋವಿಡ್-19 ಇರುವುದರಿಂದ ವಿಶ್ವವಿದ್ಯಾನಿಲಯವು ಕೈಗೊಂಡಿರುವ ಕ್ರಮವು ಸೂಕ್ತವೆಂದು ತಿಳಿಸಿದರು.<br>4. ಮಾನ್ಯ ಕುಲಪತಿಯವರು ಮಾತನಾಡಿ ನಾವು ಯಾವುದೇ ಜಾಹೀರಾತು ನೀಡದೆ ಇರುವ ತಾತ್ಕಾಲಿಕ ಸಹಾಯಕ ಪ್ರಾಧ್ಯಾಪಕರುಗಳನ್ನು ಮುಂದುವರೆಸಲು ನಿರ್ಧರಿಸಲಾಗಿದೆ ಎಂದರು.<br>5. ಮಾನ್ಯ ಸದಸ್ಯರಾದ ಪ್ರೊ.ವೆಂಕಟೇಶ್ ಕುಮಾರ್ ರವರು ಮಾತನಾಡಿ ಮಾನ್ಯ ಸದಸ್ಯ ಕಾರ್ಯದರ್ಶಿಯವರು ಕೆಲವು ವಿಭಾಗಗಳಿಗೆ ಬೋಧನಾ ಕಾರ್ಯಗಳ ವಿವರಣೆಯನ್ನು ನೀಡಲು ತಿಳಿಸುತ್ತಾರೆ ಆದರೆ ಕೆಲವು ವಿಭಾಗಗಳಿಗೆ ಬೋಧನಾ ಕಾರ್ಯಗಳ ವಿವರಣೆ ಪಡೆಯದೆ |

| | | |
|---|---|---|
| | | ಅವರುಗಳನ್ನು ನೇಮಕಾತಿ ಮಾಡುತ್ತಾರೆ ಎಂದು ತಿಳಿಸಿದರು. ಮುಂದುವರಿದು ತಾತ್ಕಾಲಿಕ ಸಹಾಯಕ ಪ್ರಾಧ್ಯಾಪಕರುಗಳನ್ನು ಒಂದು ವರ್ಷದ ಅವಧಿಗೆ ನೇಮಕಾತಿ ಮಾಡುವಂತೆ ಸಲಹೆ ಸೂಚಿಸಿದರು.<br>6. ಮಾನ್ಯ ಸದಸ್ಯರಾದ ಪ್ರೊ. ನಿಂಗರಾಜಗೌಡ ರವರು ಮಾತನಾಡಿ ಕೆಲವು ವಿಭಾಗಗಳಲ್ಲಿ ಸ್ವಯಂ ಹಣಕಾಸು ಯೋಜನೆಯಡಿಯಲ್ಲಿ ಕಾರ್ಯನಿರ್ವಹಿಸುತ್ತಿರುವ ತಾತ್ಕಾಲಿಕ ಸಹಾಯಕ ಪ್ರಾಧ್ಯಾಪಕರುಗಳನ್ನು ನೇಮಕಾತಿ ಮಾಡುವ ಬಗ್ಗೆ ಸರ್ಕಾರದಿಂದ ಅನುಮೋದನೆ ಪಡೆದು ಅಧಿಸೂಚನೆ ಹೊರಡಿಸುವಂತೆ ಸಭೆಗೆ ತಿಳಿಸಿದರು.<br>7. ಮಾನ್ಯ ಸದಸ್ಯರಾದ ಶ್ರೀಮತಿ ಪವಿತ್ರ ಇವರು ಮಾತನಾಡಿ ಪರಿನಿಯಮವನ್ನು (Statute) ಅನುಸರಿಸಲು ಸೂಚಿಸಿದರು ಹಾಗೂ ಪ್ರಸ್ತುತ ವಿಶ್ವವಿದ್ಯಾನಿಲಯವು ಕೈಗೊಂಡಿರುವ ಕ್ರಮವನ್ನು ಸಮರ್ಥಿಸಿದರು.<br>8. ಮಾನ್ಯ ಸದಸ್ಯರಾದ ಡಾ. ದಾಮೋದರ್ ರವರು ಮಾತನಾಡಿ ತಾತ್ಕಾಲಿಕ ಸಹಾಯಕ ಪ್ರಾಧ್ಯಾಪಕರುಗಳನ್ನು ಎರಡು ವರ್ಷ ಅವಧಿಗೆ ನೇಮಕಾತಿ ಮಾಡಿರುವುದು ಸೂಕ್ತವೆಂದು ತಿಳಿಸಿದರು. ಮುಂದುವರೆದು ಮುಂದಿನ ನೇಮಕಾತಿ ಪ್ರಕ್ರಿಯೆಯಲ್ಲಿ ನಿಯಮಾನುಸಾರ ಕ್ರಮ ಕೈಗೊಳ್ಳಲು ತಿಳಿಸಿದರು.<br>9. ಮಾನ್ಯ ಕುಲಪತಿಯವರು ಮಾತನಾಡಿ ನೇಮಕಾತಿ ಮಂಡಳಿ (Board of Appointment) ಮೂಲಕ ಕ್ರಮ ಕೈಗೊಳ್ಳಲು ಸಾಧ್ಯವಿಲ್ಲದಿರುವುದರಿಂದ ಸಿಂಡಿಕೇಟ್ ಸದಸ್ಯರುಗಳನ್ನೊಳಗೊಂಡ ಒಂದು ಉಪಸಮಿತಿ ರಚಿಸಿ ತೀರ್ಮಾನವನ್ನು ಕೈಗೊಳ್ಳಲಾಗುವುದೆಂದು ತಿಳಿಸಿದರು.<br>10. ಮಾನ್ಯ ಸದಸ್ಯರಾದ ಪ್ರೊ.ವೆಂಕಟೇಶ್ ಕುಮಾರ್ ರವರು ಮಾತನಾಡಿ ಮೂರು ರೀತಿಯ ವೇತನವನ್ನು ನೀಡುತ್ತಿದ್ದು, ತಾತ್ಕಾಲಿಕ ಸಹಾಯಕ ಪ್ರಾಧ್ಯಾಪಕರುಗಳ ವಿದ್ಯಾರ್ಹತೆ ಹಾಗೂ ಅವರು ನಿರ್ವಹಿಸುತ್ತಿರುವ ಕರ್ತವ್ಯ ಸಮನಾಗಿದ್ದರೂ ಸಹ ವಿಶ್ವವಿದ್ಯಾನಿಲಯವು ನೀಡುತ್ತಿರುವ ವೇತನದಲ್ಲಿ ತಾರತಮ್ಯವಿರುವ ಬಗ್ಗೆ ಸಭೆಯ ಗಮನಕ್ಕೆ ತಂದರು. ಆದ್ದರಿಂದ ಎಲ್ಲರಿಗೂ ಒಂದೇ ಮಾದರಿಯಲ್ಲಿ ವೇತನವನ್ನು ನೀಡುವಂತೆ ಸಭೆಯನ್ನು ಕೋರಿದರು.<br>11. ಮಾನ್ಯ ಸದಸ್ಯರಾದ ಡಾ. ಚೈತ್ರ ನಾರಾಯಣ್ ರವರು ಮಾತನಾಡಿ ಅಧಿಸೂಚನೆಯಲ್ಲಿ ರೂ.50,000/- ವೇತನವನ್ನು ನಮೂದಿಸಲಾಗಿದೆ ಎಂದು ತಿಳಿಸಿದರು. ಸಂಶೋಧನಾ ವಿದ್ಯಾರ್ಥಿಗಳು ಸಮಾನವಾದ ವಿದ್ಯಾರ್ಹತೆ ಹೊಂದಿದ್ದು, ಫಂಡಿಂಗ್ ಏಜೆನ್ಸಿ ಅವರಿಗೆ ಬೇರೆ ಬೇರೆ ರೀತಿಯಲ್ಲಿ ವಿದ್ಯಾರ್ಥಿ ವೇತನ ನೀಡುತ್ತಿದೆ ಎಂದು ಸಭೆಗೆ ತಿಳಿಸಿದರು.<br>12. ಮಾನ್ಯ ಸದಸ್ಯರಾದ ಶ್ರೀ ದೊಡ್ಡಚಾರಿಯವರು ಮಾತನಾಡಿ ಕೆಲವು ವಿಭಾಗಗಳಲ್ಲಿ ಬೋಧನಾ ಕಾರ್ಯದ ಅವಧಿ ಕಡಿಮೆ ಇದ್ದು ಅಲ್ಲಿ ತಾತ್ಕಾಲಿಕ ಬೋಧಕರ ಸಂಖ್ಯೆ ಹೆಚ್ಚಾಗಿರುತ್ತದೆ, ಸದರಿ ವಿಭಾಗಗಳ ಹೆಚ್ಚುವರಿ ತಾತ್ಕಾಲಿಕ ಬೋಧಕರನ್ನು ಬಿಡುಗಡೆಗೊಳಿಸಿ ಒಬ್ಬರನ್ನು ನೇಮಕಾತಿ ಮಾಡಿಕೊಳ್ಳುವುದು ಸೂಕ್ತ ಹಾಗೂ ಇದರಿಂದ ವಿಶ್ವವಿದ್ಯಾನಿಲಯದ ಆರ್ಥಿಕ ಹೊರೆ ಕಡಿಮೆಯಾಗುವುದೆಂದು ತಿಳಿಸಿದರು.<br>13. ಮಾನ್ಯ ಕುಲಪತಿಯವರು ಮಾತನಾಡಿ ಮುಂಬರುವ ದಿನಗಳಲ್ಲಿ ಪರಾಮರ್ಶಿಸಿ ಒಂದು ನಿಯಮವನ್ನು ರಚಿಸಿ ಪೂರ್ಣಾವಧಿ ಬೋಧನಾ ಕಾರ್ಯಕ್ಕೆ ರೂ.35,000/-ಗಳಂತೆ ವೇತನ ನೀಡಲು ಕ್ರಮಕೈಗೊಳ್ಳಬಹುದೆಂದು ತಿಳಿಸಿದರು.<br>14. ಮಾನ್ಯ ಸದಸ್ಯರಾದ ಪ್ರೊ.ವೆಂಕಟೇಶ್ ಕುಮಾರ್ ರವರು ಮಾತನಾಡಿ ಎರಡು ವರ್ಷ ಅವಧಿ ಪೂರ್ಣಗೊಂಡ ನಂತರ ಸದರಿ ತಾತ್ಕಾಲಿಕ ಸಹಾಯಕ ಪ್ರಾಧ್ಯಾಪಕರುಗಳು ನ್ಯಾಯಾಲಯದ ಮೊರೆ ಹೋದರೆ ವಿಶ್ವವಿದ್ಯಾನಿಲಯವು ಯಾವ ರೀತಿಯ ಕ್ರಮಗಳನ್ನು ಕೈಗೊಳ್ಳಲಾಗುತ್ತದೆ ಎಂಬ ಬಗ್ಗೆ ಸ್ಪಷ್ಟನೆ ನೀಡಿ ಎಂದು ತಿಳಿಸಿದರು. |

| | |
|---|---|
| | 15. ಮಾನ್ಯ ಸದಸ್ಯ ಕಾರ್ಯದರ್ಶಿಯವರಾದ ಪ್ರೊ.ಶಿವಪ್ಪರವರು ಮಾತನಾಡಿ ಯಾವುದೇ ಮುನ್ಸೂಚನೆಯಿಲ್ಲದೆ ಕರ್ತವ್ಯದಿಂದ ಅವರನ್ನು ಬಿಡುಗಡೆಗೊಳಿಸಬಹುದು ಹಾಗು ನೇಮಕಾತಿಯು ಕಾನೂನಿನ ವ್ಯಾಪ್ತಿಯಲ್ಲಿಯೇ ನಡೆಯುತ್ತಿದೆ ಎಂದು ತಿಳಿಸಿದರು. ಪ್ರತಿಯೊಬ್ಬರಿಗೂ ನ್ಯಾಯಾಲಯದ ಮೊರೆ ಹೋಗಲು ಅವಕಾಶವಿದೆ ಎಂದರು. |
| **ತೀರ್ಮಾನ** | ಕರ್ನಾಟಕ ರಾಜ್ಯ ವಿಶ್ವವಿದ್ಯಾನಿಲಯ ಕಾಯ್ದೆ 2000 ಪ್ರಕರಣ 56 ರ ಅನ್ವಯ ಬಿಡುಗಡೆಗೊಳಿಸಿರುವ ತಾತ್ಕಾಲಿಕ ಸಹಾಯಕ ಪ್ರಾಧ್ಯಾಪಕರುಗಳನ್ನು ಎರಡು ವರ್ಷಗಳ ಅವಧಿಗೆ (Two years, appointment with a break of Two days after one year) ನೇಮಕ ಮಾಡಿರುವ ಕ್ರಮವನ್ನು ಸಿಂಡಿಕೇಟ್ ಸಭೆಯು ಅನುಸಮರ್ಥಿಸಿತು. |
| 2021/5.2 | ಡಾ.ಮೋಕ್ಷಪತಿ, ನಿವೃತ್ತ ಸಹಾಯಕ ಪ್ರಾಧ್ಯಾಪಕರು, ಅಭಿವೃದ್ಧಿ ಅಧ್ಯಯನ ಸಂಸ್ಥೆ, ಮಾನಸಗಂಗೋತ್ರಿ, ಮೈಸೂರು ಇವರ ಜನ್ಮ ದಿನಾಂಕದ ಬಗ್ಗೆ. |
| | 1. ಮಾನ್ಯ ಕುಲಪತಿಯವರು ಮಾತನಾಡಿ ಕಾನೂನು ಸಲಹೆಗಾರರ ಅಭಿಪ್ರಾಯದ ಮೇರೆಗೆ ಡಾ.ಮೋಕ್ಷಪತಿಯವರಿಗೆ ವಿಶ್ವವಿದ್ಯಾನಿಲಯದಿಂದ ಹೆಚ್ಚುವರಿಯಾಗಿ ಪಾವತಿಸಿರುವ ವೇತನ ರೂ.17,43,435/-ಗಳನ್ನು ವಸೂಲಾತಿ ಮಾಡಲು ಕ್ರಮ ಕೈಗೊಳ್ಳಲು ನಿರ್ಧರಿಸಲಾಗಿದೆ ಎಂದು ತಿಳಿಸಿದರು.<br>2. ಮಾನ್ಯ ಸದಸ್ಯರಾದ ಪ್ರೊ.ವೆಂಕಟೇಶ್ ಕುಮಾರ್ ರವರು ಮಾತನಾಡಿ ವಿಶ್ವವಿದ್ಯಾನಿಲಯವು ಕೂಲಂಕುಷವಾಗಿ ಪರಿಶೀಲಿಸಿ, ನಿರ್ಧಾರ ತೆಗೆದುಕೊಳ್ಳುವುದು ಸೂಕ್ತ ಎಂದು ತಿಳಿಸಿದರು<br>3. ಮಾನ್ಯ ಸದಸ್ಯರಾದ ಶ್ರೀ ಎಂ.ಬಿ.ಗಪ್ಪಣ್ಣನವರು ಮಾತನಾಡಿ, ಈ ಬಗ್ಗೆ ಪರಿಶೀಲಿಸಿ ಮುಂದಿನ ಸಭೆಯಲ್ಲಿ ಈ ವಿಷಯ ಮಂಡಿಸಬಹುದಾಗಿದೆ ಎಂದರು. |
| **ತೀರ್ಮಾನ** | ಡಾ.ಮೋಕ್ಷಪತಿ, ನಿವೃತ್ತ ಸಹಾಯಕ ಪ್ರಾಧ್ಯಾಪಕರು, ಅಭಿವೃದ್ಧಿ ಅಧ್ಯಯನ ಸಂಸ್ಥೆ, ಮಾನಸಗಂಗೋತ್ರಿ, ಮೈಸೂರು ಇವರಿಗೆ ನೀಡಿರುವ ಹೆಚ್ಚುವರಿ ವೇತನ ಸಂಬಂಧ, ಎಲ್ಲಾ ದಾಖಲಾತಿಗಳನ್ನು ಕೂಲಂಕುಷವಾಗಿ ಪರಿಶೀಲಿಸಿ ಮುಂದಿನ ಸಿಂಡಿಕೇಟ್ ಸಭೆಯಲ್ಲಿ ಚರ್ಚಿಸಿದ ನಂತರ ಸೂಕ್ತ ನಿರ್ಧಾರ ತೆಗೆದುಕೊಳ್ಳಬೇಕಾಗಿರುವುದರಿಂದ ಮುಂದಿನ ಸಭೆಗೆ ಮರುಮಂಡಿಸಲು ಸದರಿ ವಿಷಯವನ್ನು ಮುಂದೂಡಲು ಸಭೆಯು ನಿರ್ಣಯಿಸಿತು. |
| 2021/5.3 | ಡಾ. ಡ್ಯಾನಿಯಲ್, ಸಹಾಯಕ ಪ್ರಾಧ್ಯಾಪಕರು, ತತ್ವಶಾಸ್ತ್ರ ಅಧ್ಯಯನ ವಿಭಾಗ, ಮಾನಸಗಂಗೋತ್ರಿ, ಮೈಸೂರು ಇವರ ಪರೀಕ್ಷಾರ್ಥ ಖಾಯಂ ಪೂರ್ವ ಸೇವಾವಧಿಯ ಬಗ್ಗೆ. |
| | ಮಾನ್ಯ ಸದಸ್ಯರಾದ ಪ್ರೊ.ವೆಂಕಟೇಶ್ ಕುಮಾರ್ ರವರು ಮಾತನಾಡಿ ವಿಶ್ವವಿದ್ಯಾನಿಲಯದ ಕಾಯಿದೆ ಪ್ರಕಾರ ನ್ಯಾಯಾಲಯದಲ್ಲಿ ದಾವೆ ಹೂಡಿದ್ದಲ್ಲಿ ಮಾತ್ರ ಸೇವಾವಧಿ ಘೋಷಣೆ ತಡೆ ಹಿಡಿಯಲು ಸಾಧ್ಯ. ಆದರೆ ಸದರಿ ವಿಷಯದಲ್ಲಿ ಸಮಾಜ ಕಲ್ಯಾಣ ಇಲಾಖೆಯಿಂದ ಯಾವುದೇ ತಕರಾರುಗಳು ಇಲ್ಲದಿರುವುದರಿಂದ ಸದರಿಯವರಿಗೆ ಪರೀಕ್ಷಾರ್ಥ ಖಾಯಂ ಪೂರ್ವ ಸೇವಾವಧಿಯನ್ನು ಘೋಷಿಸಬಹುದೆಂದರು. |
| **ತೀರ್ಮಾನ** | ಡಾ. ಡ್ಯಾನಿಯಲ್, ಸಹಾಯಕ ಪ್ರಾಧ್ಯಾಪಕರು, ತತ್ವಶಾಸ್ತ್ರ ಅಧ್ಯಯನ ವಿಭಾಗ, ಮಾನಸಗಂಗೋತ್ರಿ, ಮೈಸೂರು ಇವರು ಡಾ.ಖಂಡೋಬ ರವರ ಮರಣ ಪತ್ರವನ್ನು ಸಲ್ಲಿಸಿರುವುದನ್ನು ಸಭೆಯು ಪರಿಶೀಲಿಸಿ 2007ರ ನೇರ ನೇಮಕಾತಿಯ ಸಂಬಂಧ ಸರ್ಕಾರದ ನಿರ್ದೇಶನವನ್ನು ನಿರೀಕ್ಷಿಸುತ್ತಿರುವ ಹಾಗೂ ಸಮಾಜ ಕಲ್ಯಾಣ ಇಲಾಖೆ ವರದಿಯಲ್ಲಿನ ಅಂಶಗಳನ್ನು ಗಮನಿಸಿ ಷರತ್ತುಬದ್ಧವಾಗಿ ಷರತ್ತುಬದ್ಧವಾಗಿ ಡಾ. ಡ್ಯಾನಿಯಲ್ ರವರ ಪರೀಕ್ಷಾರ್ಥ ಖಾಯಂ ಪೂರ್ವ ಸೇವಾವಧಿಯನ್ನು ಘೋಷಿಸುವ ಸಂಬಂಧದ ವಿಷಯವನ್ನು ಸಿಂಡಿಕೇಟ್ ಸಭೆಯು ಪರಿಶೀಲಿಸಿ ಅನುಮೋದಿಸಿತು. |

| | |
|---|---|
| ಸಾಮಾನ್ಯ ಸಭೆ 2021/5.4 | ಡಾ. ವಿಶ್ವನಾಥ್.ಬಿ.ಎಸ್., ನಿವೃತ್ತ ಪ್ರಾಧ್ಯಾಪಕರು, ಜೀವರಸಾಯನ ಶಾಸ್ತ್ರ ಅಧ್ಯಯನ ವಿಭಾಗ, ಮಾನಸಗಂಗೋತ್ರಿ, ಮೈಸೂರು ಇವರ ನಿವೃತ್ತಿ ಪಿಂಚಣಿಯನ್ನು ಇತ್ಯರ್ಥಗೊಳಿಸುವ ಬಗ್ಗೆ. |
| ತೀರ್ಮಾನ | ಡಾ.ವಿಶ್ವನಾಥ್.ಬಿ.ಎಸ್., ನಿವೃತ್ತ ಪ್ರಾಧ್ಯಾಪಕರು, ಜೀವರಸಾಯನ ಶಾಸ್ತ್ರ ಅಧ್ಯಯನ ವಿಭಾಗ, ಮಾನಸಗಂಗೋತ್ರಿ, ಮೈಸೂರು ತಡೆ ಹಿಡಿಯಲಾಗಿರುವ DCRG ಮತ್ತು ಪರಿವರ್ತಿತ ಪಿಂಚಣಿಗಳೊಂದಿಗೆ ಪೂರ್ಣ ಪ್ರಮಾಣದ ವಯೋನಿವೃತ್ತಿ ಪಿಂಚಣಿ ಸೌಲಭ್ಯಗಳ ಮಂಜುರಾತಿ ಬಗೆಗಿನ ವಿಷಯವನ್ನು ಸಿಂಡಿಕೇಟ್ ಸಭೆಯು ಪರಿಶೀಲಿಸಿ ಈ ಬಗ್ಗೆ ಸದರಿಯವರಿಂದ ಸೂಕ್ತ ಮುಚ್ಚಳಿಕೆಯನ್ನು ಬರೆಯಿಸಿಕೊಂಡು ಪಿಂಚಣಿ ಸೌಲಭ್ಯವನ್ನು ನೀಡುವಂತೆ ಸಭೆಯು ತೀರ್ಮಾನಿಸಿತು. |
| ಸಾಮಾನ್ಯ ಸಭೆ 2021/5.5 | ಸಿರಿ ಕೇರೀ ಟ್ರಸ್ಟ್, ಮೈಸೂರು ಇವರ ಸಂಸ್ಥೆಯಲ್ಲಿ Specialized Programme ಅಡಿಯಲ್ಲಿ ವಿವಿಧ ಕೋರ್ಸ್‌ಗಳನ್ನು ಪ್ರಾರಂಭಿಸಲು ಮಾನ್ಯತೆ ಕೋರಿದ್ದ ಸಂಬಂಧ ವಿಶ್ವವಿದ್ಯಾನಿಲಯದ ಪರಿವೀಕ್ಷಣಾ ಸಮಿತಿಯು ಸಲ್ಲಿಸಿರುವ ವರದಿಗೆ ಅನುಮೋದನೆ ಕೋರುವ ಬಗ್ಗೆ. |
| ತೀರ್ಮಾನ | ದಿನಾಂಕ 3-5-2021 ರಂದು ವಿಶ್ವವಿದ್ಯಾನಿಲಯದ ತಜ್ಞರನ್ನು ಒಳಗೊಂಡ ಪರಿವೀಕ್ಷಣಾ ಸಮಿತಿಯ ಶಿಫಾರಸ್ಸಿನನ್ವಯ ಸಿರಿ ಕೇರೀ ಟ್ರಸ್ಟ್, # 81/82, ಜೆಎಸ್‌ಎಸ್ ಕಲಾ ಕಾಲೇಜು ಹತ್ತಿರ, ನಂಜನಗೂಡು ರಸ್ತೆ, ಮೈಸೂರು ಈ ಸಂಸ್ಥೆಗೆ Specialized Programme ಅಡಿಯಲ್ಲಿ 1. M.Sc (Child and Adolescent Psychology) 2) M.Sc (Dementia & Geriatric Psychology) 3.Diploma in De-addiction & Rehabilitation ಕೋರ್ಸ್‌ಗಳನ್ನು ಪ್ರತಿ ಕೋರ್ಸಿಗೆ 40 ವಿದ್ಯಾರ್ಥಿಗಳ ಪ್ರವೇಶಾತಿ ಮಿತಿಯೊಂದಿಗೆ 2021-22 ನೇ ಶೈಕ್ಷಣಿಕ ಸಾಲಿನಿಂದ ಪ್ರಾರಂಭಿಸಲು ಮಾನ್ಯತೆ ನೀಡುವ ಬಗೆಗಿನ ಪ್ರಸ್ತಾವನೆಯ ಸಂಬಂಧ ವಿಷಯವನ್ನು ಸಿಂಡಿಕೇಟ್ ಸಭೆಯು ಪರಿಶೀಲಿಸಿ ಅನುಮೋದಿಸಿತು. |
| 2021/5.6 | ಸೌತ್ ಏಷ್ಯಾ ಇನ್‌ಸ್ಟಿಟ್ಯೂಟ್ ಆಫ್ ಅಡ್ವಾನ್ಸ್ಡ್ ಸ್ಟಡೀಸ್ (SAIACS), ಬೆಂಗಳೂರು ಇವರಿಗೆ ಹೆಚ್ಚುವರಿಯಾಗಿ Theology ವಿಷಯದಲ್ಲಿ ಸಂಶೋಧನೆ ನಡೆಸಲು ಮೈಸೂರು ವಿಶ್ವವಿದ್ಯಾನಿಲಯದಿಂದ ಸಂಶೋಧನಾ ಕೇಂದ್ರದ ಮಾನ್ಯತೆ ನೀಡುವ ಸಂಬಂಧ ಅನುಮೋದನೆ ಕೋರುವ ಬಗ್ಗೆ. |
| ತೀರ್ಮಾನ | ದಿನಾಂಕ 27-4-2021 ರಂದು ವಿಶ್ವವಿದ್ಯಾನಿಲಯದ ತಜ್ಞರನ್ನು ಒಳಗೊಂಡ ಪರಿವೀಕ್ಷಣಾ ಸಮಿತಿಯ ಶಿಫಾರಸ್ಸಿನನ್ವಯ ಸೌತ್ ಏಷ್ಯಾ ಇನ್‌ಸ್ಟಿಟ್ಯೂಟ್ ಆಫ್ ಅಡ್ವಾನ್ಸ್ಡ್ ಸ್ಟಡೀಸ್ (SAIACS), ಬೆಂಗಳೂರು ಸಂಸ್ಥೆಗೆ Theology ವಿಷಯದಲ್ಲಿ ಸಂಶೋಧನಾ ಮಾನ್ಯತೆ ನೀಡುವ ಬಗೆಗಿನ ಪ್ರಸ್ತಾವನೆಯ ಸಂಬಂಧ ವಿಷಯವನ್ನು ಸಿಂಡಿಕೇಟ್ ಸಭೆಯು ಪರಿಶೀಲಿಸಿ ಅನುಮೋದಿಸಿತು. |
| 2021/5.7 | ಮೈಸೂರು ವಿಶ್ವವಿದ್ಯಾನಿಲಯದಲ್ಲಿ ಸಾಹಿತಿ ಡಾ.ಯು.ಆರ್. ಅನಂತಮೂರ್ತಿ ಇವರ ಹೆಸರಿನಲ್ಲಿ ಅಧ್ಯಯನ ಪೀಠವನ್ನು ಸ್ಥಾಪಿಸುವ ಕುರಿತಂತೆ ಪರಿನಿಯಮಾವಳಿಗೆ ಅನುಮೋದನೆ ನೀಡಿರುವ ಕುರಿತು. |
| ತೀರ್ಮಾನ | ಮೈಸೂರು ವಿಶ್ವವಿದ್ಯಾನಿಲಯದಲ್ಲಿ ಸಾಹಿತಿ ಡಾ.ಯು.ಆರ್. ಅನಂತಮೂರ್ತಿ ಇವರ ಹೆಸರಿನಲ್ಲಿ ಅಧ್ಯಯನ ಪೀಠವನ್ನು ಸ್ಥಾಪಿಸುವ ಕುರಿತಂತೆ ಪರಿನಿಯಮಾವಳಿಗೆ ಅನುಮೋದನೆ ನೀಡುವ ಸಂಬಂಧ ಸೂಕ್ತ ದಾಖಲೆಗಳೊಂದಿಗೆ ಮುಂದಿನ ಸಿಂಡಿಕೇಟ್ ಸಭೆಯಲ್ಲಿ ಚರ್ಚಿಸಲು ನಿರ್ಧರಿಸಿ ಸದರಿ ವಿಷಯವನ್ನು ಮುಂದೂಡಲು ಸಭೆಯು ನಿರ್ಣಯಿಸಿತು. |
| 2021/5.8 | "ಭೌದ್ಧ ಅಧ್ಯಯನ ಕೇಂದ್ರ" ವನ್ನು ಸ್ಥಾಪಿಸುವುದರ ಬಗ್ಗೆ. |
| ತೀರ್ಮಾನ | "ಭೌದ್ಧ ಅಧ್ಯಯನ ಕೇಂದ್ರ" ವನ್ನು ಸ್ಥಾಪಿಸುವುದರ ಸಂಬಂಧ ವಿದ್ಯಾ ವಿಷಯಕ ಪರಿಷತ್ ಸಭೆಯಲ್ಲಿ ಮಂಡಿಸಿ ನಂತರ ಸಿಂಡಿಕೇಟ್ ಸಭೆಯಲ್ಲಿ ತೀರ್ಮಾನವನ್ನು ಕೈಗೊಳ್ಳಲು ಸಭೆಯು ನಿರ್ಣಯಿಸಿತು. |
| 2021/5.9 | ಐ.ಸಿ.ಡಿ. ವತಿಯಿಂದ ಕೈಗೊಂಡಿರುವ ಸಮಿತಿ ಸಭೆಯಲ್ಲಿ ಭಾಗವಹಿಸುವ ಇಬ್ಬರು ಸದಸ್ಯರುಗಳಿಗೆ ವಿಶೇಷ ಅನುಮತಿ ನೀಡುವ ಬಗ್ಗೆ. |
| ತೀರ್ಮಾನ | ಐ.ಸಿ.ಡಿ. ವತಿಯಿಂದ ಕೈಗೊಂಡಿರುವ ಸಮಿತಿ ಸಭೆಯಲ್ಲಿ ಭಾಗವಹಿಸುವ ಇಬ್ಬರು ಸದಸ್ಯರುಗಳಿಗೆ ಕೆ.ಸಿ.ಎಸ್.ಆರ್ ನಿಯಮಾವಳಿ ಅಡಿಯಲ್ಲಿ ಪ್ರಯಾಣ ಭತ್ಯೆಯಾಗಿ ಪ್ರತಿ ಕಿ.ಮೀಗೆ ರೂ.2/- ಗಳಿಗೆ |

| | |
|---|---|
| | ಮೀರದಂತೆ ವಾಹನ ಭತ್ಯೆಯನ್ನು ನೀಡಲು ಮಾತ್ರ ಅವಕಾಶವಿರುವುದರಿಂದ ಡಾ.ನವೀನ್ ಕುಮಾರ್.ಎಸ್.ಕೆ, ಪ್ರಾಧ್ಯಾಪಕರು ಹಾಗೂ ಡಾ. ಮಹದೇವ ಪ್ರಸಾದ್.ಎಂ, ಪ್ರಾಧ್ಯಾಪಕರು, ಇವರ ಕೋರಿಕೆಯಂತೆ ಪ್ರತಿ ಕಿ.ಮೀ ರೂ.8/- ರೂ ಗಳಿಗೆ ಕಡಿಮೆಯಾಗದಂತೆ ವಾಹನ ಭತ್ಯೆ ನೀಡಲು ಹಾಗೂ ತಗಲುವ ವೆಚ್ಚವನ್ನು Information and Infrastructure Development Fund (IIDF) ಶೀರ್ಷಿಕೆಯಿಂದ ಭರಿಸಲು ಸಿಂಡಿಕೇಟ್ ಅನುಮೋದಿಸಿತು. |
| 2021/5.10 | ಕುಕ್ಕರಹಳ್ಳಿ ಕೆರೆಯ ಮತ್ಸ್ಯಕೇಂದ್ರದ ಬಳಿ ನಂದಿನಿ ಕ್ಷೀರ ಕೇಂದ್ರವನ್ನು ಸ್ಥಾಪಿಸಲು ಅನುಮತಿ ಕೋರಿರುವ ಬಗ್ಗೆ. |
| | 1. ಮಾನ್ಯ ಸದಸ್ಯರಾದ ಶ್ರೀ.ಪ್ರದೀಪ್ ಕುಮಾರ್ ದೀಕ್ಷಿತ್‌ರವರು ಮಾತನಾಡಿ ಕುಕ್ಕರಹಳ್ಳಿ ಕೆರೆಗೆ ಒಳಚರಂಡಿ ನೀರು ಹರಿಯುತ್ತಿರುವ ಬಗ್ಗೆ ದೂರುಗಳು ಬರುತ್ತಿದ್ದು ಇದರ ಬಗ್ಗೆ ಪರಿಶೀಲಿಸಿ ಕಾರ್ಯ ಪ್ರವೃತ್ತರಾಗಬೇಕೆಂದು ಸಲಹೆಯನ್ನು ನೀಡಿದರು.<br>2. ಮಾನ್ಯ ಸದಸ್ಯರಾದ ಶ್ರೀ ಗಪ್ಪಣ್ಣ ರವರು ಮಾತನಾಡಿ ಕುಕ್ಕರಹಳ್ಳಿ ಕೆರೆಯನ್ನು ವಿಶ್ವವಿದ್ಯಾನಿಲಯದ ವತಿಯಿಂದಲೇ ಅಭಿವೃದ್ಧಿಗೊಳಿಸಬೇಕೆಂದು ತಮ್ಮ ಅಭಿಪ್ರಾಯವನ್ನು ವ್ಯಕ್ತಪಡಿಸಿದರು.<br>3. ಮಾನ್ಯ ಸದಸ್ಯರಾದ ಡಾ. ಚೈತ್ರ ನಾರಾಯಣ್ ರವರು ಮಾತನಾಡಿ NGO ಅಥವಾ ಖಾಸಗಿ ಸಂಸ್ಥೆಯವರ ಸಂಯುಕ್ತ ಆಶ್ರಯದಲ್ಲಿ ಅಭಿವೃದ್ಧಿಪಡಿಸುವಂತೆ ತಿಳಿಸಿದರು.<br>4. ಮಾನ್ಯ ಸದಸ್ಯರಾದ ಪ್ರೊ.ವೆಂಕಟೇಶ್ ಕುಮಾರ್ ರವರು ಮಾತನಾಡಿ ವಿಶ್ವವಿದ್ಯಾನಿಲಯವು ಖಾಸಗಿ ಸಂಸ್ಥೆಯವರಿಗೆ ನೀಡುವಾಗ ಎಚ್ಚರಿಕೆ ವಹಿಸುವಂತೆ ತಿಳಿಸಿದರು.<br>5. ಪ್ರೊ. ಸೈಯದ್ ಕಾಜಾರವರು ಅನ್‌ಲೈನ್ ಮೂಲಕ ಮಾತನಾಡಿ ತಾವು ಮೈಸೂರಿಗೆ ಭೇಟಿ ನೀಡಿ ಕುಕ್ಕರಹಳ್ಳಿ ಕೆರೆಯ ಅಭಿವೃದ್ಧಿಯ ಬಗ್ಗೆ ಎರಡು ದಿನಗಳ ಕಾಲ ಅಧ್ಯಯನ ನಡೆಸಿ ವಿವರಣಾತ್ಮಕ ವರದಿ ನೀಡುವುದಾಗಿ ತಿಳಿಸಿದರು. |
| **ತೀರ್ಮಾನ** | ಕುಕ್ಕರಹಳ್ಳಿ ಕೆರೆಯ ಮತ್ಸ್ಯಕೇಂದ್ರದ ಬಳಿ ನಂದಿನಿ ಕ್ಷೀರ ಕೇಂದ್ರವನ್ನು ಸ್ಥಾಪಿಸಲು ಸಿಂಡಿಕೇಟ್ ಸಭೆಯು ಅನುಮತಿಸಿತು. |
| 2021/5.11 | ಮೈಸೂರು ವಿಶ್ವವಿದ್ಯಾನಿಲಯದ ಮೌಲ್ಯಮಾಪನ ಕೇಂದ್ರದಲ್ಲಿ ಪರಿಸರ ವಿಷಯ ಉತ್ತರ ಪತ್ರಿಕೆಗಳ ಮೌಲ್ಯಮಾಪನ ಕುರಿತು ಜರುಗಿಸಿರುವ ಪ್ರಕರಣದ ಬಗ್ಗೆ. |
| | ಮೈಸೂರು ವಿಶ್ವವಿದ್ಯಾನಿಲಯದ ಮೌಲ್ಯಮಾಪನ ಕೇಂದ್ರದಲ್ಲಿ ಪರಿಸರ ವಿಷಯ ಉತ್ತರ ಪತ್ರಿಕೆಗಳ ಮೌಲ್ಯಮಾಪನ ಕುರಿತು ಜರುಗಿಸಿರುವ ಪ್ರಕರಣದ ಬಗ್ಗೆ ಸಭೆಯು ಪರಿಶೀಲಿಸಿ ಈ ಕೆಳಕಂಡಂತೆ ಕೂಲಂಕುಷವಾಗಿ ಚರ್ಚಿಸಿತು.<br>1. ಮಾನ್ಯ ಕುಲಸಚಿವ (ಪರೀಕ್ಷಾಂಗ) ರವರು ಮಾತನಾಡಿ, ಡಾ.ಹೆಚ್.ಆರ್. ಮೀನಾಕುಮಾರಿ, ಅಧ್ಯಾಪಕರು, ಪರಿಸರ ಅಧ್ಯಯನ ವಿಭಾಗ, ಮಹಾರಾಜ ಕಾಲೇಜು ಹಾಗೂ ಶ್ರೀ.ಸುಜೀತ್, ಅಧ್ಯಾಪಕರು, ಪರಿಸರ ಅಧ್ಯಯನ ವಿಭಾಗ, ಸರ್ಕಾರಿ ಮಹಿಳಾ ಪ್ರಥಮ ದರ್ಜೆ ಕಾಲೇಜು, ಹುಣಸೂರು, ಇವರು ಪರೀಕ್ಷಾ ಭವನದಲ್ಲಿ ಪರಿಸರ ಅಧ್ಯಯನ ಹಾಗೂ ಇನ್ನಿತರ ವಿಷಯಗಳ ಮೌಲ್ಯಮಾಪನ ಕಾರ್ಯವು ಜರುಗುತ್ತಿದ್ದ ಸಂದರ್ಭದಲ್ಲಿ ವಿಶ್ವವಿದ್ಯಾನಿಲಯದ ನಿಯಮವನ್ನು ಪಾಲಿಸದೆ ಮೊಬೈಲ್‌ನಿಂದ ಮೌಲ್ಯಮಾಪನ ಕಾರ್ಯಗಳನ್ನು ಚಿತ್ರೀಕರಿಸಿ, ಸದರಿ ವಿಡಿಯೋವನ್ನು ವಾಟ್ಸ್-ಆಫ್ ಗ್ರೂಪ್‌ಗಳಿಗೆ ರವಾನಿಸಿದ್ದು, ಈ ಬಗ್ಗೆ ಮೌಖಿಕವಾಗಿ ವಿಚಾರಿಸಿದಾಗ ಅವರು ತಪ್ಪನ್ನು ಒಪ್ಪಿಕೊಂಡಿದ್ದ ನಂತರ ಮೌಲ್ಯಮಾಪನ ಕಾರ್ಯದಿಂದ ಬಿಡುಗಡೆಗೊಳಿಸಿದ್ದು, ತದನಂತರ ಅವರು ವಿಶ್ವವಿದ್ಯಾನಿಲಯದ ಅನುಮತಿ ಪಡೆಯದೇ ವಿಶ್ವವಿದ್ಯಾನಿಲಯದ ಕುಲಸಚಿವರ (ಪರೀಕ್ಷಾಂಗ) ವಿರುದ್ಧ ಪೋಲಿಸ್ ಠಾಣೆಯಲ್ಲಿ ದೂರು ದಾಖಲಿಸಿದ್ದು ಹಾಗೂ ಸುಮಾರು 15 ರಿಂದ 20 ಅಧ್ಯಾಪಕರುಗಳೊಂದಿಗೆ ಬಂದು ಕುಲಸಚಿವರ (ಪರೀಕ್ಷಾಂಗ) ಕಛೇರಿಯಲ್ಲಿ ಗಲಾಟೆ ಮಾಡಿರುವುದನ್ನು ಸಭೆಗೆ ವಿವರಿಸಿದರು. |

| | |
|---|---|
| | 2. ಮಾನ್ಯ ಸದಸ್ಯರಾದ ಶ್ರೀ ಪ್ರದೀಪ್ ಕುಮಾರ್ ದೀಕ್ಷಿತ್ ರವರು ಮಾತನಾಡಿ, ಮೌಲ್ಯ ಮಾಪನ ಕೇಂದ್ರಕ್ಕೆ ಮೊಬೈಲ್ ತೆಗೆದುಕೊಂಡು ಹೋಗಲು ಅನುಮತಿ ಇದೆಯೇ ಎಂದು ಸಭೆಯನ್ನು ಪ್ರಶ್ನಿಸಿದರು.<br>3. ಮಾನ್ಯ ಸದಸ್ಯರಾದ ಶ್ರೀಮತಿ ಪವಿತ್ರರವರು ಮಾತನಾಡಿ, ಒಂದು ಸಮಿತಿ ರಚಿಸಿ, ಅಧ್ಯಕ್ಷರು ಹಾಗೂ ಡಾ. ಹೆಚ್.ಆರ್. ಮೀನಾಕುಮಾರಿ, ಅಧ್ಯಾಪಕರು, ಪರಿಸರ ಅಧ್ಯಯನ ವಿಭಾಗ, ಮಹಾರಾಜ ಕಾಲೇಜು ಹಾಗೂ ಶ್ರೀ ಸುಜೀತ್, ಅಧ್ಯಾಪಕರು, ಪರಿಸರ ಅಧ್ಯಯನ ವಿಭಾಗ, ಸರ್ಕಾರಿ ಮಹಿಳಾ ಪ್ರಥಮ ದರ್ಜೆ ಕಾಲೇಜು, ಹುಣಸೂರು, ಇವರನ್ನು ಕರೆಯಿಸಿ ವಿಷಯವನ್ನು ಕೂಲಂಕುಷವಾಗಿ ಪರಿಶೀಲಿಸಿ ನಂತರ ಸದರಿಯವರಿಂದ ಮುಚ್ಚಳಿಕೆ ಬರೆಯಿಸಿಕೊಳ್ಳುವ ಮೂಲಕ ಸದರಿ ಪ್ರಕರಣವನ್ನು ಮುಕ್ತಾಯಗೊಳಿಸುವುದು ಸೂಕ್ತವೆಂದು ತಿಳಿಸಿದರು.<br>4. ಮಾನ್ಯ ಸದಸ್ಯರಾದ ಡಾ. ದಾಮೋದರ್‌ರವರು ಮಾತನಾಡಿ, ಸದರಿ ಪ್ರಕರಣ ನಡೆದಿರುವ ಬಗ್ಗೆ ಸಿ.ಸಿ.ಟಿವಿ ಫೂಟೇಜ್ ಇರುವುದನ್ನು ಪರಿಶೀಲಿಸಿ, ಕ್ರಮವನ್ನು ಕೈಗೊಳ್ಳುವುದು ಸೂಕ್ತವೆಂದರು.<br>5. ಮಾನ್ಯ ಸದಸ್ಯರಾದ ಪ್ರೊ.ವೆಂಕಟೇಶ್ ಕುಮಾರ್ ರವರು ಮಾತನಾಡಿ, ಮಾನ್ಯ ಕುಲಸಚಿವ (ಪರೀಕ್ಷಾಂಗ) ರವರು ತೆಗೆದುಕೊಂಡಿರುವ ನಿರ್ಧಾರ ಸಮರ್ಥವಾಗಿದೆ ಎಂದು ತಮ್ಮ ಅಭಿಪ್ರಾಯವನ್ನು ವ್ಯಕ್ತಪಡಿಸಿದರು.<br>6. ಮಾನ್ಯ ಸದಸ್ಯರಾದ ಪ್ರೊ. ದೊಡ್ಡಚಾರಿಯವರು ಮಾತನಾಡಿ, ವಿಶ್ವವಿದ್ಯಾನಿಲಯವು ನಿಯಮಾವಳಿಗಳ ಪ್ರಕಾರ, ಮೌಲ್ಯಮಾಪನ ಮಾಡಲು ಸೂಚಿಸಿದ್ದರೂ ಕೂಡ ವಿಡಿಯೋ ಚಿತ್ರೀಕರಣ ನಡೆಸಿರುವುದು ಹಾಗೂ ವಿಶ್ವವಿದ್ಯಾನಿಲಯದ ಅನುಮತಿ ಇಲ್ಲದೇ ಡಾ.ಹೆಚ್.ಆರ್. ಮೀನಾಕುಮಾರಿರವರು ಪೋಲಿಸ್ ಠಾಣೆಯಲ್ಲಿ ದೂರು ನೀಡಿರುವುದು ಸರಿಯಿಲ್ಲ ಎಂದು ತಿಳಿಸಿದರು.<br>7. ಮಾನ್ಯ ಸದಸ್ಯರಾದ ಡಾ.ನಿಂಗರಾಜ ಗೌಡರವರು ಕೂಲಂಕಷವಾಗಿ ಪರಿಶೀಲಿಸಿ, ಕ್ರಮ ಕೈಗೊಳ್ಳಲು ಸೂಕ್ತವೆಂದು ತಿಳಿಸಿದರು.<br>8. ಮಾನ್ಯ ಸದಸ್ಯರಾದ ಶ್ರೀಮತಿ ಪವಿತ್ರರವರು ಮಾತನಾಡಿ, ಡಾ.ಮೀನಾಕುಮಾರಿ ಯವರು ವಿಡೀಯೋವನ್ನು ಮಾಡಿದ್ದಾರೋ ಅಥವಾ ಇಲ್ಲವೋ ಎಂಬುದನ್ನು ಕೂಲಂಕುಷವಾಗಿ ಪರಿಶೀಲಿಸಿ, ನಿರ್ಧಾರವನ್ನು ತೆಗೆದುಕೊಳ್ಳಬೇಕಾಗಿತ್ತು ಎಂದು ಅಭಿಪ್ರಾಯಪಟ್ಟರು. ಆದರೆ ಮಾನ್ಯ ಕುಲಸಚಿವ (ಪರೀಕ್ಷಾಂಗ)ರವರು ಮಾತನಾಡಿ, ಸದರಿಯವರನ್ನು ವಿಚಾರಿಸಿದ ನಂತರವೇ ಮೌಲ್ಯಮಾಪನ ಕೆಲಸದಿಂದ ಬಿಡುಗಡೆಗೊಳಿಸಲಾಯಿತು ಎಂದು ತಿಳಿಸಿದರು. |
| **ತೀರ್ಮಾನ** | ಸಿಂಡಿಕೇಟ್ ಸದಸ್ಯರನ್ನೊಳಗೊಂಡ ಒಂದು ಉಪಸಮಿತಿಯನ್ನು ರಚಿಸಿ ಎರಡು ತಿಂಗಳೊಳಗಾಗಿ ವರದಿಯನ್ನು ನೀಡುವಂತೆ ಸೂಚಿಸಿ, ಸದರಿ ಸಮಿತಿಯು ನೀಡಿರುವ ವರದಿಯ ಅನ್ವಯ, ಮುಂದಿನ ಕ್ರಮವನ್ನು ಕೈಗೊಳ್ಳುವ ಬಗ್ಗೆ ಮಾನ್ಯ ಕುಲಪತಿಯವರಿಗೆ ಅಧಿಕಾರವನ್ನು ನೀಡಲು ಸಭೆಯು ತೀರ್ಮಾನಿಸಿತು. |
| 2021/5.12 | ಜೈನಾಶಾಸ್ತ್ರ ಮತ್ತು ಪ್ರಾಕೃತ, ದೈಹಿಕ ಶಿಕ್ಷಣ ಮತ್ತು ಕ್ರೀಡಾ ವಿಜ್ಞಾನ, ರೇಷ್ಮೆಕೃಷಿ ವಿಜ್ಞಾನ, ಅಧ್ಯಯನ ವಿಭಾಗಗಳ ಅಧ್ಯಕ್ಷರನ್ನು ನೇಮಕ ಮಾಡುವುದರ ಬಗ್ಗೆ. |
| | ದೈಹಿಕ ಶಿಕ್ಷಣ ಮತ್ತು ಕ್ರೀಡಾ ವಿಜ್ಞಾನ ಅಧ್ಯಯನ ವಿಭಾಗಕ್ಕೆ ಅಧ್ಯಕ್ಷರನ್ನು ನೇಮಕ ಮಾಡುವ ಸಂಬಂಧ ಸಭೆಯಲ್ಲಿ ಸುದೀರ್ಘವಾಗಿ ಚರ್ಚಿಸಲಾಯಿತು.<br>1. ಮಾನ್ಯ ಸದಸ್ಯರಾದ ಪ್ರೊ.ವೆಂಕಟೇಶ್ ಕುಮಾರ್ ರವರು ಮಾತನಾಡಿ ಜೇಷ್ಠತೆಯ ಆಧಾರದ ಮೇಲೆ ಬೇರೆಯವರಿಗೆ ಅವಕಾಶವನ್ನು ನೀಡಿ ಎಂದು ತಿಳಿಸಿದರು.<br>2. ಮಾನ್ಯ ಸದಸ್ಯರಾದ ಡಾ.ದಾಮೋದರ್‌ರವರು ಮಾತನಾಡಿ ಪರಿನಿಯಮ ಹಾಗು ಕಾಯಿದೆಯನ್ವಯ ಅಧ್ಯಕ್ಷರನ್ನು ನೇಮಕ ಮಾಡಿ ಎಂದು ತಿಳಿಸಿದರು.<br>3. ಮಾನ್ಯ ಸದಸ್ಯರಾದ ಶ್ರೀ.ಗಪ್ಪಣ್ಣ, ಡಾ.ನಿಂಗರಾಜ ಗೌಡರವರು ಹಾಗೂ ಶ್ರೀಮತಿ.ಪವಿತ್ರ ರವರು ಮಾತನಾಡಿ ಹಾಲಿ ಅಧ್ಯಕ್ಷರಾಗಿರುವ ಪ್ರೊ.ವೆಂಕಟೇಶ್ ರವರನ್ನು ಮುಂದಿನ ಒಂದು |

| | |
|---|---|
| | ತಿಂಗಳವರೆಗೆ ವಿಭಾಗದ ಅಧ್ಯಕ್ಷರನ್ನಾಗಿ ಮುಂದುವರೆಸುವಂತೆ ತಮ್ಮ ಅಭಿಪ್ರಾಯವನ್ನು ವ್ಯಕ್ತಪಡಿಸಿದರು.<br>4. ಮಾನ್ಯ ಕುಲಪತಿಯವರು ಮಾತನಾಡಿ 2002ರ ಪರಿನಿಯಮಗಳ ಅನುಸಾರ ಪ್ರೊ.ವೆಂಕಟೇಶ್ ರವರನ್ನು ವಿಭಾಗದ ಅಧ್ಯಕ್ಷರನ್ನಾಗಿ ನೇಮಕ ಮಾಡಿರುವ ಬಗ್ಗೆ ಸಭೆಯ ಗಮನಕ್ಕೆ ತಂದರು. |
| **ತೀರ್ಮಾನ** | ಕರ್ನಾಟಕ ರಾಜ್ಯ ವಿಶ್ವವಿದ್ಯಾನಿಲಯಗಳ ಕಾಯ್ದೆ 2000, ಪ್ರಕರಣ 34(7)ರ ಪ್ರಕಾರ ಈ ಕೆಳಕಂಡ ವಿಭಾಗಗಳಿಗೆ ಅಧ್ಯಕ್ಷರನ್ನು ಎರಡು ವರ್ಷಗಳ ಅವಧಿಗೆ ಜೇಷ್ಠತೆಯ ಆಧಾರದ ಮೇಲೆ ನೇಮಕ ಮಾಡಲು ಸಭೆಯು ನಿರ್ಣಯಿಸಿತು.<br>1. ಡಾ.ಪಿ.ಪದ್ಮಾವತಿ, ಪ್ರಾಧ್ಯಾಪಕರು, ಜೈನಾಶಾಸ್ತ್ರ ಮತ್ತು ಪ್ರಾಕೃತ ಅಧ್ಯಯನ ವಿಭಾಗ, ಮೈಸೂರು ಇವರು ದಿನಾಂಕ 31–5–2021 ರಂದು ವಯೋ ನಿವೃತ್ತಿ ಹೊಂದುತ್ತಿದ್ದು, ಸದರಿ ವಿಭಾಗದಲ್ಲಿ ಯಾರು ಖಾಯಂ ಅಧ್ಯಾಪಕರು ಜೇಷ್ಠತಾ ಪಟ್ಟಿಯಲ್ಲಿ ಇಲ್ಲದಿರುವುದರಿಂದ ಕನ್ನಡ ಅಧ್ಯಯನ ಸಂಸ್ಥೆಯಲ್ಲಿರುವ ಹಿರಿಯ ಅಧ್ಯಾಪಕರಿಗೆ ಅಧ್ಯಕ್ಷರ ಸ್ಥಾನವನ್ನು ನೀಡುವ ಅಧಿಕಾರವನ್ನು ಮಾನ್ಯ ಕುಲಪತಿಯವರಿಗೆ ನೀಡಲು ಸಿಂಡಿಕೇಟ್ ಸಭೆಯು ತೀರ್ಮಾನಿಸಿತು.<br>2. ದೈಹಿಕ ಶಿಕ್ಷಣ ಮತ್ತು ಕ್ರೀಡಾ ವಿಜ್ಞಾನ ಅಧ್ಯಯನ ವಿಭಾಗದ ಅಧ್ಯಕ್ಷರನ್ನಾಗಿ ಶಿಕ್ಷಣ ನಿಕಾಯದ ಡೀನರನ್ನು ತಾತ್ಕಾಲಿಕವಾಗಿ ಮುಂದಿನ ಆದೇಶದವರೆಗೆ ನೇಮಕ ಮಾಡಲು ಸಭೆಯು ತೀರ್ಮಾನಿಸಿತು.<br>3. ರೇಷ್ಮೆಕೃಷಿ ವಿಜ್ಞಾನ ಅಧ್ಯಯನ ವಿಭಾಗದ ಅಧ್ಯಕ್ಷರನ್ನಾಗಿ ನಿಯಮಾನುಸಾರ ನೇಮಕ ಮಾಡಲು ಮಾನ್ಯ ಕುಲಪತಿಯವರಿಗೆ ಅಧಿಕಾರ ನೀಡಲು ಸಭೆಯು ತೀರ್ಮಾನಿಸಿತು. |
| 2021/13. | **PROMOTIONS TO UNIVERSITY TEACHERS UNDER UGC-CAS** |
| **Decision:** | The Syndicate has noted the procedure adopted in convening the meeting of the Selection committee through online for promotion to the teachers under UGC-Career Advancement Scheme for the teachers who are going to retire in the month of 2021 on 12-5-2021. The recommendations of the Selection Committee in various subjects for promotion of teachers in various disciplines to the higher AGP furnished at Annexure – A is approved. Further, the Syndicate has also decided to extend the monetary benefits to the teachers from the date of the Eligibility or from the decision of the Syndicate which was held on 25-11-2020 whichever is later in respect to the cadre of Professor. In respect to the cadre of Associate Professor from Assistant Professor the monetary benefits to the teachers from the date of the Eligibility or from the decision of the Syndicate i.e. 28-05-2021. |
| **ಸಾಮಾನ್ಯ ಸಭೆ 2021/5.14** | ಶ್ರೀ ಎಸ್.ಡಿ.ದೊಡ್ಡಚಾರಿ, ಸಿಂಡಿಕೇಟ್ ಸದಸ್ಯರು, ಮೈಸೂರು ವಿಶ್ವವಿದ್ಯಾನಿಲಯ, ಮೈಸೂರು ಇವರ ಪತ್ರ ದಿನಾಂಕ: 04-05-2021. |
| | ಶ್ರೀ ಎಸ್.ಡಿ.ದೊಡ್ಡಚಾರಿ, ಸಿಂಡಿಕೇಟ್ ಸದಸ್ಯರು, ಮೈಸೂರು ವಿಶ್ವವಿದ್ಯಾನಿಲಯ, ಮೈಸೂರು ಇವರ ಪತ್ರದ ದಿನಾಂಕ 04-05-2021 ರಲ್ಲಿ ತಿಳಿಸಿರುವಂತೆ ವಿಶ್ವವಿದ್ಯಾನಿಲಯದ ವ್ಯಾಪ್ತಿಯ ಜನರಿಗೆ ಅನುಕೂಲ ಮಾಡಿಕೊಡುವ ದೃಷ್ಟಿಯಿಂದ ಈಗಾಗಲೇ ಕಾರ್ಯನಿರ್ವಹಿಸುತ್ತಿರುವ ನೈಟ್ರೋಜನ್ ಘಟಕದ ಜೊತೆಗೆ ಸ್ವಲ್ಪ ದೊಡ್ಡ ಪ್ರಮಾಣದಲ್ಲೇ ಆಕ್ಸಿಜನ್ ಉತ್ಪಾದಿಸುವಂತಹ ಘಟಕವನ್ನು ವಿಶ್ವವಿದ್ಯಾನಿಲಯದ ಅವರಣದಲ್ಲಿ ಸೂಕ್ತ ಸ್ಥಳದಲ್ಲಿ ಸ್ಥಾಪಿಸಬೇಕೆಂದು ಸಭೆಯಲ್ಲಿ ಪ್ರಸ್ತಾಪಿಸಿದರು. |

| | |
|---|---|
| ತೀರ್ಮಾನ | ಮೈಸೂರು ವಿಶ್ವವಿದ್ಯಾನಿಲಯದಲ್ಲಿ ಲಿಕ್ವಿಡ್ ನೈಟ್ರೋಜನ್ ಘಟಕದೊಂದಿಗೆ ವಿಶ್ವವಿದ್ಯಾನಿಲಯದ ಆವರಣದಲ್ಲಿ ಆಕ್ಸಿಜನ್ ಉತ್ಪಾದಿಸುವಂತಹ ಘಟಕವನ್ನು ಸ್ಥಾಪಿಸುವ ಸಂಬಂಧ ಒಂದು ತಾಂತ್ರಿಕ ಸಮಿತಿಯನ್ನು ರಚಿಸಿ, ಸಮಿತಿಯು ತೆಗೆದುಕೊಳ್ಳುವ ವರದಿಯನ್ವಯ ಕ್ರಮ ತೆಗೆದುಕೊಳ್ಳಲು ಸಭೆಯಲ್ಲಿ ಅನುಮೋದಿಸಲಾಯಿತು. |
| ಸಾಮಾನ್ಯ ಸಭೆ 2021/5.15 | ವಿಶ್ವವಿದ್ಯಾನಿಲಯದ ವಿವಿಧ ವಿಭಾಗಗಳಲ್ಲಿ Indoor Digital Signage Boards ಖರೀದಿಸಿ ಅಳವಡಿಸುವ ಬಗೆಗೆ. |
| | ಮಾನ್ಯ ಕುಲಪತಿಗಳು ಮಾತನಾಡಿ, ಮೈಸೂರು ವಿಶ್ವವಿದ್ಯಾನಿಲಯವು 4ನೇ ಬಾರಿ ನ್ಯಾಕ್ ಮೌಲ್ಯಮಾಪನಕ್ಕೆ ಒಳಪಡುವ ಹಿನ್ನೆಲೆಯಲ್ಲಿ ನ್ಯಾಕ್ ಪೀರ್ ತಂಡವು ವಿಶ್ವವಿದ್ಯಾನಿಲಯಕ್ಕೆ ಭೇಟಿ ನೀಡುವುದರಿಂದ ಆಡಳಿತ ಕಛೇರಿಗಳು ಮತ್ತು ವಿವಿಧ ವಿಭಾಗಗಳ ದಾಖಲಾತಿಗಳನ್ನು ಮತ್ತು ಮಾಹಿತಿಗಳನ್ನು ತಂಡಕ್ಕೆ ಪ್ರಸ್ತುತಪಡಿಸಿ ಪ್ರದರ್ಶಿಸಬೇಕಾಗಿರುತ್ತದೆ. ಮಾಹಿತಿಗಳನ್ನು ಪ್ರದರ್ಶಿಸುವಾಗ/ಪ್ರಸ್ತುತಪಡಿಸುವಾಗ ವಿವಿಧ ವಿಭಾಗಗಳಿಗೆ Indoor Digital Signage Boards ಗಳ ಅವಶ್ಯವಿರುತ್ತದೆ. Indoor Digital Signage Boards ಗಳನ್ನು ಖರೀದಿಸುವ ಸಂಬಂಧ ವಿವಿಧ ಕಂಪನಿಗಳನ್ನು ಸಂಪರ್ಕಿಸಿ ಅವರಿಂದ ಪ್ರಸ್ತಾವನೆಯನ್ನು ಆಹ್ವಾನಿಸಿ ಅಂದಾಜು ವೆಚ್ಚ ಮತ್ತು ಅಗತ್ಯ ಉಪಕರಣಗಳ ಅಂತಿಮ ಪಟ್ಟಿಯನ್ನು ತಯಾರಿಸಿದ್ದು, ಅಂದಾಜು ಪಟ್ಟಿಯ ಪ್ರಕಾರ ಈ ಸೌಲಭ್ಯಗಳನ್ನು ಪಡೆಯಲು ರೂ. 56,00,000/-ಗಳು ಬೇಕಾಗಬಹುದೆಂದು ಅಂದಾಜಿಸಲಾಗಿದೆ. ಇದೊಂದು ವಿಶೇಷ ಪ್ರಕರಣವೆಂದು ಪರಿಗಣಿಸಿ ಹಾಗೂ Technical Committee for information and Communication Technology Equipment's and Services ಸಮಿತಿಯ ಒಪ್ಪಿಗೆಯನ್ನು ಕಾಯ್ದಿರಿಸಿ, ಇ-ಪ್ರೊಕ್ಯೂರ್‌ಮೆಂಟ್ ಪೋರ್ಟಲ್ ಮುಖಾಂತರ ಐಸಿಡಿ ವಿಭಾಗಕ್ಕೆ ಮೀಸಲಿಟ್ಟಿರುವ Information Infrastructure Development Fund (IIDF) ಶೀರ್ಷಿಕೆಯಿಂದ ಅಂದಾಜು ವೆಚ್ಚ ರೂ. 56,00,000/-ಗಳಲ್ಲಿ ಟೆಂಡರ್ ಪ್ರಕಟಣೆ ಹೊರಡಿಸಲು ಸಭೆಯು ಅನುಮೋದನೆ ನೀಡಬೇಕೆಂದು ಸಭೆಯಲ್ಲಿ ಪ್ರಸ್ತಾಪಿಸಿದರು. |
| ತೀರ್ಮಾನ | ಮೈಸೂರು ವಿಶ್ವವಿದ್ಯಾನಿಲಯಕ್ಕೆ ನ್ಯಾಕ್ ತಂಡವು ಭೇಟಿ ನೀಡುತ್ತಿರುವ ಸಂಬಂಧ ಇದೊಂದು ವಿಶೇಷ ಸಂದರ್ಭವೆಂದು ಪರಿಗಣಿಸಿ, ವಿವಿಧ ವಿಭಾಗಗಳಿಗೆ ಅವಶ್ಯವಿರುವ Indoor Digital Signage Boards ಗಳನ್ನು Technical Committee for information and Communication Technology Equipment's and Services ಸಮಿತಿಯ ಒಪ್ಪಿಗೆಯನ್ನು ಕಾಯ್ದಿರಿಸಿ, ಕರ್ನಾಟಕ ಸಾರ್ವಜನಿಕ ಸಂಗ್ರಹಣೆ ಪಾರದರ್ಶಕತೆ ಅಧ್ಯಾದೇಶ 2000, ಅಧ್ಯಾಯ-2ರ ಅಧಿನಿಯಮ 3(2)ರನ್ವಯ ಇ-ಪ್ರೊಕ್ಯೂರ್‌ಮೆಂಟ್ ಪೋರ್ಟಲ್ ಮುಖಾಂತರ ಐಸಿಡಿ ವಿಭಾಗಕ್ಕೆ ಮೀಸಲಿಟ್ಟಿರುವ Information Infrastructure Development Fund (IIDF) ಶೀರ್ಷಿಕೆಯಿಂದ ಅಂದಾಜು ವೆಚ್ಚ ರೂ. 56,00,000/-ಗಳಲ್ಲಿ ಟೆಂಡರ್ ಪ್ರಕಟಣೆ ಹೊರಡಿಸಿ ಖರೀದಿಸಲು ಸಭೆಯು ಅನುಮೋದಿಸಿತು. |
| ಸಾಮಾನ್ಯ ಸಭೆ 2021/5.16 | Rathna College of Business Management, ಮೈಸೂರು ಇವರ ಸಂಸ್ಥೆಯಲ್ಲಿ Specialized Programme ಅಡಿಯಲ್ಲಿ ವಿವಿಧ ಕೋರ್ಸ್‌ಗಳನ್ನು ಪ್ರಾರಂಭಿಸಲು ಮಾನ್ಯತೆ ಕೋರಿದ್ದ ಸಂಬಂಧ ವಿಶ್ವವಿದ್ಯಾನಿಲಯದ ಪರಿವೀಕ್ಷಣಾ ಸಮಿತಿಯು ಸಲ್ಲಿಸಿರುವ ವರದಿಗೆ ಅನುಮೋದನೆ ಕೋರುವ ಬಗ್ಗೆ. |
| ತೀರ್ಮಾನ | Rathna College of Business Management, (Jeevan Dharan Trust), #1783, 1ನೇ ಮಹಡಿ, ನ್ಯೂ ಸಯ್ಯಾಜಿರಾವ್ ರಸ್ತೆ, ಮೈಸೂರು ಸಂಸ್ಥೆಗೆ Specialized Programme ಅಡಿಯಲ್ಲಿ ಹೊಸದಾಗಿ 1. B.Com. (Banking), 2. B.Com. (Hotel management) ಮತ್ತು 3. B.Com. (Digital marketing) ಕೋರ್ಸ್‌ಗಳನ್ನು ಪ್ರತಿ ಕೋರ್ಸಿಗೆ 40 |

| | |
|---|---|
| | ವಿದ್ಯಾರ್ಥಿಗಳ ಪ್ರವೇಶಾತಿ ಮಿತಿಯೊಂದಿಗೆ 2021-22ನೇ ಶೈಕ್ಷಣಿಕ ಸಾಲಿನಿಂದ ಪ್ರಾರಂಭಿಸಲು ಮಾನ್ಯತೆ ನೀಡುವ ಬಗ್ಗೆ ವಿಶ್ವವಿದ್ಯಾನಿಲಯದ ಪರಿವೀಕ್ಷಣಾ ಸಮಿತಿಯು ಭೇಟಿ ನೀಡಿ ಪರಿಶೀಲಿಸಿ ಸಲ್ಲಿಸಿರುವ ವರದಿ/ಶಿಫಾರಸ್ಸನ್ನು ಸಿಂಡಿಕೇಟ್ ಸಭೆಯು ಅನುಮೋದಿಸಿತು. |
| **ಸಾಮಾನ್ಯ ಸಭೆ 2021/5.17** | 2021-22ನೇ ಸಾಲಿಗೆ National Knowledge Network (NKN) ಯೋಜನೆಯಡಿಯಲ್ಲಿ ಸ್ಥಳೀಯ BSNL ಸಹಯೋಗದೊಂದಿಗೆ ವಿಶ್ವವಿದ್ಯಾನಿಲಯಕ್ಕೆ 1Gbps ಇಂಟರ್‌ನೆಟ್ Bandwidth ಸರಬರಾಜು ಪಡೆಯುವ ವೆಚ್ಚವನ್ನು ಪಾವತಿಸುವ ಬಗ್ಗೆ. |
| **ತೀರ್ಮಾನ** | 2021-22ನೇ ಸಾಲಿಗೆ National Knowledge Network (NKN) ಯೋಜನೆಯಡಿಯಲ್ಲಿ ಸ್ಥಳೀಯ BSNL ಸಹಯೋಗದೊಂದಿಗೆ ವಿಶ್ವವಿದ್ಯಾನಿಲಯಕ್ಕೆ 1Gbps ಇಂಟರ್‌ನೆಟ್ Bandwidth ಸರಬರಾಜು ಪಡೆಯುವ ಸಂಬಂಧ Infrastructure Development Fund (HDF)" ಶೀರ್ಷಿಕೆಯಿಂದ ಸ್ಥಳೀಯ BSNL ರವರಿಗೆ 2021ರ ಏಪ್ರಿಲ್‌ನಿಂದ 2022ನೇ ಮಾರ್ಚ್‌ವರೆಗೆ ನಾಲ್ಕು ಕಂತುಗಳಲ್ಲಿ ಪಾವತಿಸಲು ಸಭೆಯಲ್ಲಿ ತೀರ್ಮಾನಿಸಲಾಯಿತು. |
| **ಸಾಮಾನ್ಯ ಸಭೆ 2021/5.18** | ವಿಶ್ವವಿದ್ಯಾನಿಲಯದ ಸ್ಕೂಲ್ ಆಫ್ ಇಂಜಿನಿಯರಿಂಗ್‌ನ ಪ್ರಯೋಗಾಲಯ, ಕಛೇರಿ ಹಾಗೂ ಇನ್ನಿತರ ಕೊಠಡಿಗಳಿಗೆ ಇಂಟರ್‌ನೆಟ್ ಸಂಪರ್ಕ ಮತ್ತು ಸಿಸಿಟಿವಿ ಸೌಲಭ್ಯ ಕಲ್ಪಿಸುವ ಬಗ್ಗೆ. |
| **ತೀರ್ಮಾನ** | ಮೈಸೂರು ವಿಶ್ವವಿದ್ಯಾನಿಲಯಕ್ಕೆ ನ್ಯಾಕ್ ತಂಡವು ಭೇಟಿ ನೀಡುತ್ತಿರುವ ಸಂಬಂಧ ಇದೊಂದು ವಿಶೇಷ ಸಂದರ್ಭವೆಂದು ಪರಿಗಣಿಸಿ, ವಿಶ್ವವಿದ್ಯಾನಿಲಯದ ಸ್ಕೂಲ್ ಆಫ್ ಇಂಜಿನಿಯರಿಂಗ್‌ನ ಪ್ರಯೋಗಾಲಯ, ಕಛೇರಿ ಹಾಗೂ ಇನ್ನಿತರ ಕೊಠಡಿಗಳಿಗೆ ಇಂಟರ್‌ನೆಟ್ ಸಂಪರ್ಕ ಮತ್ತು ಸಿಸಿಟಿವಿ ಸೌಲಭ್ಯ ಕಲ್ಪಿಸುವ ಸಂಬಂಧ Technical Committee for Information and Communication Technology Equipment's and Services ಸಮಿತಿಯ ಒಪ್ಪಿಗೆಯನ್ನು ಕಾಯ್ದಿರಿಸಿ, ಕರ್ನಾಟಕ ಸಾರ್ವಜನಿಕ ಸಂಗ್ರಹಣೆ ಪಾರದರ್ಶಕತೆ ಆಧ್ಯಾದೇಶ 2000, ಅಧ್ಯಾಯ-2ರ ಅಧಿನಿಯಮ 3(2)ರನ್ವಯ ಇ-ಪ್ರೊಕ್ಯೂರ್‌ಮೆಂಟ್ ಪೋರ್ಟಲ್ ಮುಖಾಂತರ ಐಸಿಡಿ ವಿಭಾಗಕ್ಕೆ ಮೀಸಲಿಟ್ಟಿರುವ Information Infrastructure Development Fund (IIDF) ಶೀರ್ಷಿಕೆಯಿಂದ ಅಂದಾಜು ವೆಚ್ಚ ರೂ.2,47,00,000/-ಗಳಿಗೆ ಟೆಂಡರ್ ಪ್ರಕಟಣೆ ಹೊರಡಿಸಲು ಸಭೆಯಲ್ಲಿ ತೀರ್ಮಾನಿಸಲಾಯಿತು. |
| **ಸಾಮಾನ್ಯ ಸಭೆ 2021/5.19** | ಕೋವಿಡ್-19 ವೈರಾಣುವಿನಿಂದ ವಿಶ್ವವಿದ್ಯಾನಿಲಯದ ವ್ಯಾಪ್ತಿಗೆ ಒಳಪಡುವ ಜಿಲ್ಲೆಗಳಲ್ಲಿ ನಿಧನರಾದ ಪೋಷಕರ ಮಕ್ಕಳಿಗೆ ಸ್ನಾತಕ ಪೂರ್ವ ಮತ್ತು ಸ್ನಾತಕೋತ್ತರ ವಿಷಯಗಳಿಗೆ 2021-22ನೇ ಶೈಕ್ಷಣಿಕ ಸಾಲಿಗೆ ಮಾತ್ರ ಅನ್ವಯವಾಗುವಂತೆ ಉಚಿತವಾಗಿ ಪ್ರವೇಶಾತಿಯನ್ನು ನೀಡುವ ಬಗ್ಗೆ. |
| | ವಿಶ್ವವಿದ್ಯಾನಿಲಯದ ವ್ಯಾಪ್ತಿಗೆ ಒಳಪಡುವ ಜಿಲ್ಲೆಗಳಲ್ಲಿ ಕೋವಿಡ್-19 ವೈರಾಣುವಿನಿಂದ, ನಿಧನರಾದ ಪೋಷಕರ ಮಕ್ಕಳಿಗೆ ಸ್ನಾತಕ ಪೂರ್ವ ಮತ್ತು ಸ್ನಾತಕೋತ್ತರ ವಿಷಯಗಳಲ್ಲಿ 2021-22ನೇ ಶೈಕ್ಷಣಿಕ ಸಾಲಿಗೆ ಮಾತ್ರ ಅನ್ವಯವಾಗುವಂತೆ ಉಚಿತ ಶಿಕ್ಷಣವನ್ನು ನೀಡುವ ಸಲುವಾಗಿ ಪ್ರಸ್ತಾವನೆಯೊಂದನ್ನು ಈ ಸಭೆಯಲ್ಲಿ ಮಂಡಿಸುತ್ತಿರುವುದಾಗಿ ಮಾನ್ಯ ಕುಲಪತಿಗಳು ತಿಳಿಸುತ್ತಾ ಇದಕ್ಕೆ ಪೂರಕವಾಗಿ ಡಾ. ಈ.ಸಿ.ನಿಂಗರಾಜಗೌಡರವರು ಸಹ ಒಂದು ಪತ್ರವನ್ನ ವಿಶ್ವವಿದ್ಯಾನಿಲಯಕ್ಕೆ ಬರೆದಿದ್ದಾರೆಂದು ತಿಳಿಸಿದರು.<br>ಸಭೆಯಲ್ಲಿದ್ದ ಎಲ್ಲಾ ಸಿಂಡಿಕೇಟ್ ಸದಸ್ಯರುಗಳು ಪ್ರಸ್ತಾವನೆಯನ್ನು ಒಕ್ಕೊರಲಿನಿಂದ ಅನುಮೋದಿಸಿದರು. |
| **ತೀರ್ಮಾನ** | ಕೋವಿಡ್-19 ವೈರಾಣುವಿನಿಂದ ವಿಶ್ವವಿದ್ಯಾನಿಲಯದ ವ್ಯಾಪ್ತಿಗೊಳಪಡುವ ಜಿಲ್ಲೆಗಳಲ್ಲಿ ನಿಧನರಾದ ಪೋಷಕರ ಮಕ್ಕಳಿಗೆ ಶೈಕ್ಷಣಿಕ ಹಿತದೃಷ್ಟಿಯಿಂದ ಘಟಕ ಕಾಲೇಜುಗಳಾದ ಮಹಾರಾಜ ಕಾಲೇಜು, ಯುವರಾಜ ಕಾಲೇಜು ವಿಶ್ವವಿದ್ಯಾನಿಲಯದ ಸಂಜೆ ಕಾಲೇಜು ಮತ್ತು ವಿಶ್ವವಿದ್ಯಾನಿಲಯ ಲಲಿತ ಕಲೆಗಳ ಕಾಲೇಜುಗಳಲ್ಲಿ ತಲಾ ಐದು ಸೀಟುಗಳನ್ನು ಹಾಗೂ ವಿಶ್ವವಿದ್ಯಾನಿಲಯದ ಸ್ನಾತಕೋತ್ತರ ಕೇಂದ್ರಗಳಾದ ಮಾನಸಗಂಗೋತ್ರಿ, ಮೈಸೂರು, |

| | |
|---|---|
| | ಸರ್ ಎಂ.ವಿಶ್ವೇಶ್ವರಯ್ಯ ಸ್ನಾತಕೋತ್ತರ ಕೇಂದ್ರ, ತೂಬಿನಕೆರೆ, ಮಂಡ್ಯ, ಸ್ನಾತಕೋತ್ತರ ಕೇಂದ್ರ, ಹೇಮಗಂಗೋತ್ರಿ, ಹಾಸನ ಮತ್ತು ಡಾ.ಬಿ.ಆರ್.ಅಂಬೇಡ್ಕರ್ ಸ್ನಾತಕೋತ್ತರ ಕೇಂದ್ರ, ಚಾಮರಾಜಗಳಲ್ಲಿ ತಲಾ ಮೂರು ಸೀಟುಗಳ ಪ್ರವೇಶಾತಿಯನ್ನು ಅರ್ಹ ವಿದ್ಯಾರ್ಥಿಗಳಿಗೆ ಹೆಚ್ಚುವರಿಯಾಗಿ 2021-22ನೇ ಶೈಕ್ಷಣಿಕ ಸಾಲಿಗೆ ಮಾತ್ರ ಅನ್ವಯವಾಗುವಂತೆ ಉಚಿತವಾಗಿ ನೀಡಲು ಸಭೆಯು ಅನುಮೋದಿಸಿತು. |
| ಸಾಮಾನ್ಯ ಸಭೆ 2021/5.20 | Creation of Faculty of Engineering and Constitution of BOS in Engineering in the University of Mysore |
| **DECESION** | University needs to create and start Faculty of Engineering and to constitute the BOS under Faculty of Engineering along with other facilities presently existing in the University to frame guidelines, curriculum, syllabus and other academic matters for the establishment of the self-finance Constituent Engineering College in the University of Mysore during academic year 2021-22 was approved by the Syndicate. |
| ಸಾಮಾನ್ಯ ಸಭೆ 2021/5.21 | 'ಕುಣಗಳ್ಳಿ ಎಸ್, ಅಶ್ವಥನಾರಾಯಣ್' ಮತ್ತು 'ಕುಣಗಳ್ಳಿ ಲಲಿತಮ್ಮ ಎಸ್ ಅಶ್ವಥನಾರಾಯಣ್' ಎಂಬ ಹೆಸರುಗಳಲ್ಲಿ ಎರಡು ಚಿನ್ನದ ಪದಕ ದತ್ತಿಗಳನ್ನು ಸ್ಥಾಪನೆ ಮಾಡುವ ಬಗ್ಗೆ. |
| ತೀರ್ಮಾನ | ಕರ್ನಾಟಕ ರಾಜ್ಯ ವಿಶ್ವವಿದ್ಯಾನಿಲಯಗಳ ಕಾಯ್ದೆ ಅನ್ವಯ ಪ್ರಕರಣ 31 (2) (IX) ಪ್ರಕಾರ ದಾನಿಗಳು ದತ್ತಿಯ ನಿಬಂಧನೆಯಲ್ಲಿ ತಿಳಿಸಿರುವಂತೆ ಪ್ರತಿ ವರ್ಷ ಸದರಿ ದತ್ತಿಯ ಮೂಲಧನಕ್ಕೆ ಕ್ರೋಢೀಕೃತವಾಗುವ ಬಡ್ಡಿಯ ಹಣದಲ್ಲಿ ಶೇ.20ರಷ್ಟನ್ನು ದತ್ತಿಯ ಮೂಲಧನಕ್ಕೆ ಸೇರಿಸಿ, ಉಳಿದ ಶೇ.80ರಷ್ಟು ಬಡ್ಡಿ ಹಣವನ್ನು 1. ಕುಣಗಳ್ಳಿ ಎಸ್. ಅಶ್ವಥ್‌ನಾರಾಯಣ್' ಎಂಬ ಹೆಸರಿನಲ್ಲಿ ಸ್ನಾತಕೋತ್ತರ ಪದವಿಯ Botany ಮತ್ತು 2. 'ಕುಣಗಳ್ಳಿ ಲಲಿತಮ್ಮ ಎಸ್. ಅಶ್ವಥ್‌ನಾರಾಯಣ್' ಎಂಬ ಹೆಸರಿನಲ್ಲಿ ಸ್ನಾತಕೋತ್ತರ ಪದವಿಯ Kannada ಸಂಬಂಧಿತ ವಿಷಯ/ಪತ್ರಿಕೆಯಲ್ಲಿ ಪ್ರಥಮ ಬಾರಿಗೆ ತೇರ್ಗಡೆಯಾದ ಅತಿ ಹೆಚ್ಚು ಅಂಕ ಗಳಿಸಿದ ವಿದ್ಯಾರ್ಥಿಗೆ ಮೇಲಿನ ಚಿನ್ನದ ಪದಕಗಳನ್ನು ನೀಡುವ ಸಂಬಂಧ ಎರಡು ದತ್ತಿಗಳನ್ನು ಸ್ಥಾಪನೆ ಮಾಡಲು ಸಭೆಯಲ್ಲಿ ಅನುಮೋದಿಸಲಾಯಿತು. |
| ಸಾಮಾನ್ಯ ಸಭೆ 2021/5.22 | 'ಎನ್.ಎಸ್.ಸುರೇಂದ್ರನಾಥ್ 'ಚಿನ್ನದ ಪದಕ ದತ್ತಿಯನ್ನು ಸ್ಥಾಪನೆ ಮಾಡುವ ಬಗ್ಗೆ. |
| ತೀರ್ಮಾನ | ಕರ್ನಾಟಕ ರಾಜ್ಯ ವಿಶ್ವವಿದ್ಯಾನಿಲಯಗಳ ಕಾಯ್ದೆ ಅನ್ವಯ ಪ್ರಕರಣ 31 (2) (IX) ಪ್ರಕಾರ ದಾನಿಗಳು ದತ್ತಿಯ ನಿಬಂಧನೆಯಲ್ಲಿ ತಿಳಿಸಿರುವಂತೆ ಪ್ರತಿ ವರ್ಷ ಸದರಿ ದತ್ತಿಯ ಮೂಲಧನಕ್ಕೆ ಕ್ರೋಢೀಕೃತವಾಗುವ ಬಡ್ಡಿಯ ಹಣದಲ್ಲಿ ಶೇ.20ರಷ್ಟನ್ನು ದತ್ತಿಯ ಮೂಲಧನಕ್ಕೆ ಸೇರಿಸಿ, ಉಳಿದ ಶೇ.80ರಷ್ಟು ಬಡ್ಡಿ ಹಣವನ್ನು ಸ್ನಾತಕೋತ್ತರ ಪದವಿಯ Chemistry ಸಂಬಂಧಿತ ವಿಷಯ/ಪತ್ರಿಕೆಯಲ್ಲಿ ಪ್ರಥಮ ಬಾರಿಗೆ ತೇರ್ಗಡೆಯಾದ ಅತಿ ಹೆಚ್ಚು ಅಂಕ ಗಳಿಸಿದ ವಿದ್ಯಾರ್ಥಿಗೆ ಚಿನ್ನದ ಪದಕವನ್ನು ನೀಡುವ ಸಂಬಂಧ 'ಎನ್.ಎಸ್.ಸುರೇಂದ್ರನಾಥ್ ಚಿನ್ನದ ಪದಕ' ದತ್ತಿಯನ್ನು ಸ್ಥಾಪನೆ ಮಾಡಲು ಸಭೆಯಲ್ಲಿ ಅನುಮೋದಿಸಲಾಯಿತು. |
| ಸಾಮಾನ್ಯ ಸಭೆ 2021/5.23 | 'Prof.N.R.Mohan Madhyasta Gold Medal' ದತ್ತಿ ಸ್ಥಾಪನೆ ಮಾಡುವ ಬಗ್ಗೆ. |
| ತೀರ್ಮಾನ | ಕರ್ನಾಟಕ ರಾಜ್ಯ ವಿಶ್ವವಿದ್ಯಾನಿಲಯಗಳ ಕಾಯ್ದೆ ಅನ್ವಯ ಪ್ರಕರಣ 31 (2) (IX) ಪ್ರಕಾರ ದಾನಿಗಳು ದತ್ತಿಯ ನಿಬಂಧನೆಯಲ್ಲಿ ತಿಳಿಸಿರುವಂತೆ ಪ್ರತಿ ವರ್ಷ ಸದರಿ ದತ್ತಿಯ ಮೂಲಧನಕ್ಕೆ ಕ್ರೋಢೀಕೃತವಾಗುವ ಬಡ್ಡಿಯ ಹಣದಲ್ಲಿ ಶೇ.20ರಷ್ಟನ್ನು ದತ್ತಿಯ ಮೂಲಧನಕ್ಕೆ ಸೇರಿಸಿ, |

| | |
|---|---|
| | ಉಳಿದ ಶೇ.೮೦ರಷ್ಟು ಬಡ್ಡಿ ಹಣವನ್ನು ಸ್ನಾತಕೋತ್ತರ ಪದವಿಯ M.Sc. Statistics ಸಂಬಂಧಿತ ವಿಷಯ/ಪತ್ರಿಕೆಯಲ್ಲಿ ಪ್ರಥಮ ಬಾರಿಗೆ ತೇರ್ಗಡೆಯಾದ ಅತಿ ಹೆಚ್ಚು ಅಂಕ ಗಳಿಸಿದ ವಿದ್ಯಾರ್ಥಿಗೆ ಮೇಲಿನ ಚಿನ್ನದ ಪದಕಗಳನ್ನು ನೀಡುವ ಸಂಬಂಧ 'Prof.N.R.Mohan Madhyastha Gold Medal' ದತ್ತಿಯನ್ನು ಸ್ಥಾಪನೆ ಮಾಡಲು ಸಭೆಯಲ್ಲಿ ಅನುಮೋದಿಸಲಾಯಿತು. |
| ಸಾಮಾನ್ಯ ಸಭೆ 2021/5.24 | 'Prof.N.B.Ramachandra Gold Medal' ಎರಡು ಚಿನ್ನದ ಪದಕ ದತ್ತಿ ಮತ್ತು 'Prof.N.B.Ramachandra Cash Prize' ಒಂದು ನಗದು ಬಹುಮಾನ ಸ್ಥಾಪನೆ ಮಾಡುವ ಬಗ್ಗೆ. |
| ತೀರ್ಮಾನ | ಕರ್ನಾಟಕ ರಾಜ್ಯ ವಿಶ್ವವಿದ್ಯಾನಿಲಯಗಳ ಕಾಯ್ದೆ ಅನ್ವಯ ಪ್ರಕರಣ 31 (2) (IX) ಪ್ರಕಾರ ದಾನಿಗಳು ದತ್ತಿಯ ನಿಬಂಧನೆಯಲ್ಲಿ ತಿಳಿಸಿರುವಂತೆ ಪ್ರತಿ ವರ್ಷ ಸದರಿ ದತ್ತಿಯ ಮೂಲಧನಕ್ಕೆ ಕ್ರೋಢೀಕೃತವಾಗುವ ಬಡ್ಡಿಯ ಹಣದಲ್ಲಿ ಶೇ.೨೦ರಷ್ಟನ್ನು ದತ್ತಿಯ ಮೂಲಧನಕ್ಕೆ ಸೇರಿಸಿ, ಉಳಿದ ಶೇ.೮೦ರಷ್ಟು ಬಡ್ಡಿ ಹಣವನ್ನು M.Sc. in Zoology ಮತ್ತು M.Sc in Genetics ಸಂಬಂಧಿತ ವಿಷಯ/ಪತ್ರಿಕೆಯಲ್ಲಿ ಪ್ರಥಮ ಬಾರಿಗೆ ತೇರ್ಗಡೆಯಾದ ಅತಿ ಹೆಚ್ಚು ಅಂಕ ಗಳಿಸಿದ ವಿದ್ಯಾರ್ಥಿಗೆ 'Prof.N.B.Ramachandra Gold Medal' ಚಿನ್ನದ ಪದಕ ದತ್ತಿಗಳನ್ನು ಹಾಗೂ M.Sc in Zoology ಸಂಬಂಧಿತ ವಿಷಯ/ಪತ್ರಿಕೆಯಲ್ಲಿ ಪ್ರಥಮ ಬಾರಿಗೆ ತೇರ್ಗಡೆಯಾದ ಅತಿ ಹೆಚ್ಚು ಅಂಕ ಗಳಿಸಿದ ವಿದ್ಯಾರ್ಥಿಗೆ 'Prof. N.B.Ramachandra Cash Prize' ನಗದು ಬಹುಮಾನ ನೀಡುವ ಸಂಬಂಧ ಎರಡು ಚಿನ್ನದ ಪದಕ ದತ್ತಿಗಳನ್ನು ಹಾಗೂ ಒಂದು ನಗದು ಬಹುಮಾನ ಸ್ಥಾಪನೆ ಮಾಡಲು ಸಭೆಯಲ್ಲಿ ಅನುಮೋದಿಸಲಾಯಿತು. |
| ಸಾಮಾನ್ಯ ಸಭೆ 2021/5.25 | 'Prof.S.N.Narahari Pandith Gold Medal' ದತ್ತಿ ಸ್ಥಾಪನೆ ಮಾಡುವ ಬಗ್ಗೆ. |
| ತೀರ್ಮಾನ | ಕರ್ನಾಟಕ ರಾಜ್ಯ ವಿಶ್ವವಿದ್ಯಾನಿಲಯಗಳ ಕಾಯ್ದೆ ಅನ್ವಯ ಪ್ರಕರಣ 31 (2) (IX) ಪ್ರಕಾರ ದಾನಿಗಳು ದತ್ತಿಯ ನಿಬಂಧನೆಯಲ್ಲಿ ತಿಳಿಸಿರುವಂತೆ ಪ್ರತಿ ವರ್ಷ ಸದರಿ ದತ್ತಿಯ ಮೂಲಧನಕ್ಕೆ ಕ್ರೋಢೀಕೃತವಾಗುವ ಬಡ್ಡಿಯ ಹಣದಲ್ಲಿ ಶೇ.೨೦ರಷ್ಟನ್ನು ದತ್ತಿಯ ಮೂಲಧನಕ್ಕೆ ಸೇರಿಸಿ, ಉಳಿದ ಶೇ.೮೦ರಷ್ಟು ಬಡ್ಡಿ ಹಣವನ್ನು M.Sc. Statistics ಸಂಬಂಧಿತ ವಿಷಯ/ಪತ್ರಿಕೆಯಲ್ಲಿ ಪ್ರಥಮ ಬಾರಿಗೆ ತೇರ್ಗಡೆಯಾದ ಅತಿ ಹೆಚ್ಚು ಅಂಕ ಗಳಿಸಿದ ವಿದ್ಯಾರ್ಥಿಗೆ ಚಿನ್ನದ ಪದಕವನ್ನು ನೀಡುವ ಸಂಬಂಧ 'Prof.S.N.Narahari Pandith Gold Medal' ದತ್ತಿಯನ್ನು ಸ್ಥಾಪನೆ ಮಾಡಲು ಸಭೆಯಲ್ಲಿ ಅನುಮೋದಿಸಲಾಯಿತು. |
| ಸಾಮಾನ್ಯ ಸಭೆ 2021/5.26 | ಪ್ರೊ.ಎಸ್.ಶಿವರಾಜಪ್ಪ ಚಿನ್ನದ ಪದಕ ದತ್ತಿಗಳನ್ನು ಸ್ಥಾಪನೆ ಮಾಡುವ ಬಗ್ಗೆ. |
| ತೀರ್ಮಾನ | ಕರ್ನಾಟಕ ರಾಜ್ಯ ವಿಶ್ವವಿದ್ಯಾನಿಲಯಗಳ ಕಾಯ್ದೆ ಅನ್ವಯ ಪ್ರಕರಣ 31 (2) (IX) ಪ್ರಕಾರ ದಾನಿಗಳು ದತ್ತಿಯ ನಿಬಂಧನೆಯಲ್ಲಿ ತಿಳಿಸಿರುವಂತೆ ಪ್ರತಿ ವರ್ಷ ಸದರಿ ದತ್ತಿಯ ಮೂಲಧನಕ್ಕೆ ಕ್ರೋಢೀಕೃತವಾಗುವ ಬಡ್ಡಿಯ ಹಣದಲ್ಲಿ ಶೇ.೨೦ರಷ್ಟನ್ನು ದತ್ತಿಯ ಮೂಲಧನಕ್ಕೆ ಸೇರಿಸಿ, ಉಳಿದ ಶೇ.೮೦ರಷ್ಟು ಬಡ್ಡಿ ಹಣವನ್ನು ಸ್ನಾತಕ ಪದವಿಯ ಬಿ.ಎ, ಬಿ.ಕಾಂ, ಬಿಬಿಎ ಪದವಿಯ ಸಂಸ್ಕೃತ ವಿಷಯದ ದ್ವಿತೀಯ ವರ್ಷದಲ್ಲಿ ವಿಷಯ/ಪತ್ರಿಕೆಯಲ್ಲಿ ಪ್ರಥಮ ಬಾರಿಗೆ ತೇರ್ಗಡೆಯಾದ ಅತಿ ಹೆಚ್ಚು ಅಂಕ ಗಳಿಸಿದ ವಿದ್ಯಾರ್ಥಿಗೆ ಚಿನ್ನದ ಪದಕವನ್ನು ನೀಡುವ ಸಂಬಂಧ 'ಪ್ರೊ.ಎಸ್.ಶಿವರಾಜಪ್ಪ ಚಿನ್ನದ ಪದಕ' ದತ್ತಿಯನ್ನು ಸ್ಥಾಪನೆ ಮಾಡಲು ಸಭೆಯಲ್ಲಿ ಅನುಮೋದಿಸಲಾಯಿತು. |

| | |
|---|---|
| ಸಾಮಾನ್ಯ ಸಭೆ 2021/5.27 | ಪ್ರೊ.ನಟರಾಜ್ ಚಿನ್ನದ ಪದಕ ದತ್ತಿಗಳನ್ನು ಸ್ಥಾಪನೆ ಮಾಡುವ ಬಗ್ಗೆ. |
| ತೀರ್ಮಾನ | ಕರ್ನಾಟಕ ರಾಜ್ಯ ವಿಶ್ವವಿದ್ಯಾನಿಲಯಗಳ ಕಾಯ್ದೆ ಅನ್ವಯ ಪ್ರಕರಣ 31 (2) (IX) ಪ್ರಕಾರ ದಾನಿಗಳು ದತ್ತಿಯ ನಿಬಂಧನೆಯಲ್ಲಿ ತಿಳಿಸಿರುವಂತೆ ಪ್ರತಿ ವರ್ಷ ಸದರಿ ದತ್ತಿಯ ಮೂಲಧನಕ್ಕೆ ಕ್ರೋಢೀಕೃತವಾಗುವ ಬಡ್ಡಿಯ ಹಣದಲ್ಲಿ ಶೇ.20ರಷ್ಟನ್ನು ದತ್ತಿಯ ಮೂಲಧನಕ್ಕೆ ಸೇರಿಸಿ, ಉಳಿದ ಶೇ.80ರಷ್ಟು ಬಡ್ಡಿ ಹಣವನ್ನು 1. ಸ್ನಾತಕ ಪದವಿಯ Psychology ಮತ್ತು 2. ಸ್ನಾತಕೋತ್ತರ ಪದವಿಯ Psychology ಸಂಬಂಧಿತ ವಿಷಯ/ಪತ್ರಿಕೆಯಲ್ಲಿ ಪ್ರಥಮ ಬಾರಿಗೆ ತೇರ್ಗಡೆಯಾದ ಎರಡನೇ ಅತಿ ಹೆಚ್ಚು ಅಂಕ ಗಳಿಸಿದ ವಿದ್ಯಾರ್ಥಿಗೆ 'ಪ್ರೊ.ನಟರಾಜ್ ಚಿನ್ನದ ಪದಕ' ದತ್ತಿಗಳನ್ನು ನೀಡುವ ಸಂಬಂಧ ಎರಡು ದತ್ತಿಗಳನ್ನು ಸ್ಥಾಪನೆ ಮಾಡಲು ಸಭೆಯಲ್ಲಿ ಅನುಮೋದಿಸಲಾಯಿತು. |
| ಸಾಮಾನ್ಯ ಸಭೆ 2021/5.28 | 'ಬೇಡಿಗನಹಳ್ಳಿ ಚೆಲುವಶೆಟ್ಟಿ ಮುದ್ದಮ್ಮ' ಚಿನ್ನದ ಪದಕ ದತ್ತಿ ಸ್ಥಾಪನೆ ಮಾಡುವ ಬಗ್ಗೆ. |
| ತೀರ್ಮಾನ | ಕರ್ನಾಟಕ ರಾಜ್ಯ ವಿಶ್ವವಿದ್ಯಾನಿಲಯಗಳ ಕಾಯ್ದೆ ಅನ್ವಯ ಪ್ರಕರಣ 31 (2) (IX) ಪ್ರಕಾರ ದಾನಿಗಳು ದತ್ತಿಯ ನಿಬಂಧನೆಯಲ್ಲಿ ತಿಳಿಸಿರುವಂತೆ ಪ್ರತಿ ವರ್ಷ ಸದರಿ ದತ್ತಿಯ ಮೂಲಧನಕ್ಕೆ ಕ್ರೋಢೀಕೃತವಾಗುವ ಬಡ್ಡಿಯ ಹಣದಲ್ಲಿ ಶೇ.20ರಷ್ಟನ್ನು ದತ್ತಿಯ ಮೂಲಧನಕ್ಕೆ ಸೇರಿಸಿ, ಉಳಿದ ಶೇ.80ರಷ್ಟು ಬಡ್ಡಿ ಹಣವನ್ನು ಕನ್ನಡ ಎಂ.ಎ ಸಂಬಂಧಿತ ವಿಷಯ/ಪತ್ರಿಕೆಗಳಲ್ಲಿ ನಾಲ್ಕು ಸೆಮಿಸ್ಟರ್‌ಗಳಲ್ಲಿ ಅತಿ ಹೆಚ್ಚು ಅಂಕ ಗಳಿಸಿ, ಪ್ರಥಮ ಬಾರಿಗೆ ತೇರ್ಗಡೆಯಾದ ವಿದ್ಯಾರ್ಥಿಗೆ ಚಿನ್ನದ ಪದಕವನ್ನು ನೀಡುವ ಸಂಬಂಧ 'ಬೇಡಿಗನಹಳ್ಳಿ ಚೆಲುವಶೆಟ್ಟಿ ಮುದ್ದಮ್ಮ' ಚಿನ್ನದ ಪದಕ ದತ್ತಿಯನ್ನು ಸ್ಥಾಪನೆ ಮಾಡಲು ಸಭೆಯಲ್ಲಿ ಅನುಮೋದಿಸಲಾಯಿತು. |

**ಇತರೆ ವಿಷಯಗಳು:**

1) ಪ್ರೊ. ಜಿ.ವೆಂಕಟೇಶ್‌ಕುಮಾರ್ ಮಾತನಾಡಿ, ದಿನಾಂಕ: 25-03-2021ರಂದು ನಡೆದ ಸಿಂಡಿಕೇಟ್ ಸಭೆಯಲ್ಲಿ ಕೆಲವೊಂದು ಕಾರ್ಯಸೂಚಿಗಳನ್ನು ಮುಂದಿನ ಸಭೆಯಲ್ಲಿ ಮಂಡಿಸಲಾಗುವುದೆಂದು ನಿರ್ಣಯಿಸಲಾಗಿದ್ದರೂ, ಸದರಿ ಸಿಂಡಿಕೇಟ್ ಸಭೆಯಲ್ಲಿ ಮಂಡಿಸಿರುವುದಿಲ್ಲ ಹಾಗೂ ಕೆಲವು ಸಿಂಡಿಕೇಟ್ ಸದಸ್ಯರುಗಳು ನೀಡುವ ವಿಷಯವನ್ನು ಕಾರ್ಯಸೂಚಿಯಲ್ಲಿ ಸೇರ್ಪಡೆಗೊಳಿಸಿರುತ್ತೀರಿ. ಆದರೆ, ದಿನಾಂಕ: 17-03-2021ರಂದು ಲಿಖಿತವಾಗಿ ಪತ್ರಮುಖೇನ ಸಿಂಡಿಕೇಟ್ ಸಭೆಯಲ್ಲಿ ವಿಷಯವನ್ನು ಮಂಡಿಸಬೇಕೆಂದು ನೀಡಿದ್ದರೂ ಇದುವರೆವಿಗೂ ಕಾರ್ಯಸೂಚಿಯಲ್ಲಿ ಸೇರ್ಪಡೆಗೊಳಿಸಿ ಮಂಡಿಸಿರುವುದಿಲ್ಲವೆಂದು ಬೇಸರ ವ್ಯಕ್ತಪಡಿಸಿದರು. ಮುಂದುವರೆದು ಮುಂದಿನ ಸಿಂಡಿಕೇಟ್ ಸಭೆಯಲ್ಲಿ ಸಲ್ಲಿಸಿರುವ ವಿಷಯವನ್ನು ಮಂಡಿಸುವುದು ಸೂಕ್ತವೆಂದು ಅಭಿಪ್ರಾಯಿಸಿದರು. ಹಾಗೆಯೇ ಸಿಂಡಿಕೇಟ್‌ನಲ್ಲಿ ಅನುಮೋದಿಸಲ್ಪಟ್ಟಿರುವ ಒಂದೆರೆಡು ಕಾರ್ಯಸೂಚಿಗಳಿಗೆ ಇದುವರೆವಿಗೂ ಆದೇಶವನ್ನು ಹೊರಡಿಸಿರುವುದಿಲ್ಲವೆಂದು ತಿಳಿಸಿದರು ಮತ್ತು ಪರಿಶಿಷ್ಟ ಜಾತಿ : ಪರಿಶಿಷ್ಟ ವರ್ಗದ ವಿದ್ಯಾರ್ಥಿಗಳಿಗೆ ಸಂಶೋಧನಾ ಶುಲ್ಕಗಳಿಗೆ ವಿನಾಯಿತಿ ನೀಡಿರುವಂತೆ, ಇತರೆ ವರ್ಗದ ವಿದ್ಯಾರ್ಥಿಗಳಿಗೂ ಶುಲ್ಕದಲ್ಲಿ ವಿನಾಯಿತಿ ನೀಡಬೇಕೆಂದು ಕೋರಿದರು.

ಈ ಪ್ರಸ್ತಾವನೆಗೆ ಸಂಬಂಧಿಸಿದಂತೆ ಮಾತನಾಡಿದ್ದ ಶ್ರೀ ದೊಡ್ಡಚಾರಿಯವರು ಶ್ರೀ ಟಿ.ಸಿ.ನಾರಾಯಣ ಅವರ ಜ್ಯೇಷ್ಠತೆಯನ್ನು ಪೂರ್ವಾನ್ವಯವಾಗುವಂತೆ ಮರುಪರಿಗಣಿಸುವ ಬಗ್ಗೆ ಕಾನೂನು ಸಲಹೆಗಾರರ ಅಭಿಪ್ರಾಯ ಪಡೆದು ಮುಂದಿನ ಸಭೆಯಲ್ಲಿ ಮಂಡಿಸಲಾಗುವುದೆಂದು ದಿನಾಂಕ: 25-03-2021ರಂದು ನಡೆದ ಸಿಂಡಿಕೇಟ್ ಸಬೆಯಲ್ಲಿ ತೀರ್ಮಾನಿಸಲಾಗಿತ್ತು. ಆದರೆ, ಸದರಿ

ಉದ್ಯೋಗಿಯ ವಿಷಯವನ್ನು ಉದ್ದೇಶಪೂರ್ವಕವಾಗಿ ಸದರಿ ಸಭೆಯಲ್ಲಿ ಮಂಡಿಸಿರುವುದಿಲ್ಲ ತಿಳಿಸಿದರು.

ಮೇಲಿನ ಅಂಶಗಳನ್ನು ಅವಲೋಕಿಸಿದ ಮಾನ್ಯ ಕುಲಪತಿಯವರು ಮಾತನಾಡಿ, ಈ ರೀತಿಯ ವಿಷಯಗಳನ್ನು ಕೂಲಂಕಷವಾಗಿ ಪರಿಶೀಲಿಸಿ ಮುಂದಿನ ಸಭೆಯಲ್ಲಿ ಮಂಡಿಸಲು ಕ್ರಮ ವಹಿಸಲಾಗುವುದೆಂದು ಹಾಗೂ ಪರಿಶಿಷ್ಟ ಜಾತಿ : ಪರಿಶಿಷ್ಟ ವರ್ಗದ ವಿದ್ಯಾರ್ಥಿಗಳಿಗೆ ಸಂಶೋಧನಾ ಶುಲ್ಕಗಳಿಗೆ ವಿನಾಯಿತಿ ನೀಡಿರುವಂತೆ, ಇತರೆ ವರ್ಗದ ವಿದ್ಯಾರ್ಥಿಗಳಿಗೂ ಶುಲ್ಕದಲ್ಲಿ ವಿನಾಯಿತಿ ನೀಡುವ ಸಂಬಂಧ ಪರಿಶೀಲಿಸಲಾಗುವುದೆಂದು ತಿಳಿಸಿದರು.

2) ಶ್ರೀ ಪ್ರದೀಪ್‌ಕುಮಾರ್ ದೀಕ್ಷಿತ್ ಅವರು ಮಾತನಾಡಿ, ಡಾ.ಬಿ.ಆರ್.ಅಂಬೇಡ್ಕರ್ ಸ್ನಾತಕೋತ್ತರ ಕೇಂದ್ರ, ಚಾಮರಾಜನಗರ ಇಲ್ಲಿ ಕ್ಯಾಂಟೀನ್ ತೆರೆಯಲು ಆರು ತಿಂಗಳ ಹಿಂದೆಯೇ ಮನವಿ ಸಲ್ಲಿಸಲಾಗಿತ್ತು. ಆದರೆ, ಇದುವರೆವಿಗೂ ಕಾರ್ಯಗತಗೊಳಿಸಿರುವುದಿಲ್ಲ.

ಮಾನ್ಯ ಕುಲಪತಿಯವರು ಮಾತನಾಡಿ, ಒಂದೆರೆಡು ತಿಂಗಳುಗಳಲ್ಲಿ ಕ್ಯಾಂಟೀನ್ ತೆರೆಯಲಾಗುವುದೆಂದು ಆಶ್ವಾಸನೆ ನೀಡಿದರು.

3) ಶ್ರೀ ಎಂ.ಬಿ.ಗಪ್ಪಣ್ಣನವರು ಮಾತನಾಡಿ, ವಿಶ್ವವಿದ್ಯಾನಿಲಯದ ಶಿಕ್ಷಣ ಸಂಸ್ಥೆಗಳಲ್ಲಿ ವ್ಯಾಸಂಗ ಮಾಡುತ್ತಿದ್ದ ವಿದೇಶದ ವಿದ್ಯಾರ್ಥಿಗಳು (ಚೈನಾ, ಕೊರಿಯಾ) ಕೋವಿಡ್-19 ಪ್ರಯುಕ್ತ ತಮ್ಮ ದೇಶದಲ್ಲೇ ಉಳಿದುಕೊಂಡಿದ್ದಾರೆ. ಇಂತಹ ವಿದೇಶಿ ವಿದ್ಯಾರ್ಥಿಗಳ ಶೈಕ್ಷಣಿಕ ಹಿತದೃಷ್ಟಿಯಿಂದ ಆನ್‌ಲೈನ್ ಮುಖಾಂತರ ಪರೀಕ್ಷೆ ಬರೆಯಲು ಅವಕಾಶ ಮಾಡಿಕೊಡಬೇಕೆಂದು ಕೋರಿದರು.

ಈ ಸಂಬಂಧ ಮಾತನಾಡಿದ ಮಾನ್ಯ ಕುಲಪತಿಗಳು ಸದರಿ ವಿದೇಶಿ ವಿದ್ಯಾರ್ಥಿಗಳು ಮನವಿ ಪತ್ರವನ್ನು ಸಲ್ಲಿಸಿದಲ್ಲಿ ವಿಶ್ವವಿದ್ಯಾನಿಲಯದ ಶಿಕ್ಷಣ ಮಂಡಳಿ ಸಭೆಯಲ್ಲಿ ವಿಷಯವನ್ನು ಮಂಡಿಸಿ ಅನುಮೋದನೆ ಪಡೆದು ಸೂಕ್ತಕ್ರಮ ತೆಗೆದುಕೊಳ್ಳಲಾಗುವುದೆಂದು ಸಭೆಗೆ ತಿಳಿಸಿದರು.

4) ಶ್ರೀ ಕುಮಾರ್ ಅವರು ಮಾತನಾಡಿ. ಕಾಲೇಜು ಅಭಿವೃದ್ಧಿ ಮಂಡಳಿಯ ನಿರ್ದೇಶಕರ ನೇಮಕಾತಿಗೆ ಆಗ್ರಹಪಡಿಸಿದರು.

ಇದಕ್ಕೆ ಪ್ರತಿಕ್ರಿಯಿಸಿದ ಮಾನ್ಯ ಕುಲಪತಿಯವರು ಕಾಲೇಜು ಅಭಿವೃದ್ಧಿ ಮಂಡಳಿಯ ನಿರ್ದೇಶಕರ ಹುದ್ದೆಯ ನೇಮಕಾತಿಗೆ ಸಂಬಂಧಿಸಿದಂತೆ ಅಧಿಸೂಚನೆ ಹೊರಡಿಸುವ ಸಂದರ್ಭದಲ್ಲಿ ಇ.ಎಂ.ಆರ್.ಸಿ., ಸೇರಿದಂತೆ ಮೂರು ಹುದ್ದೆಗಳಿಗೆ ಒಟ್ಟಾರೆಯಾಗಿ ಅಧಿಸೂಚನೆ ಹೊರಡಿಸಿ, ಡಿಸೆಂಬರ್ 2021 ಅಂತ್ಯದೊಳಗೆ ನೇಮಕಾತಿ ಪ್ರಕ್ರಿಯೆ ಕೈಗೊಳ್ಳಲಾಗುವುದೆಂದು ತಿಳಿಸಿದರು.

ಅಂತಿಮವಾಗಿ ಪ್ರೊ. ಜಿ.ವೆಂಕಟೇಶ್‌ಕುಮಾರ್ ಮತ್ತು ಶ್ರೀ ದೊಡ್ಡಚಾರಿ ಅವರುಗಳು ಮಾತನಾಡಿ, ಇದುವರೆವಿಗೂ ಸಿಎಎಸ್ ಅಡಿಯಲ್ಲಿ ಪದೋನ್ನತಿಯನ್ನು ಸ್ನಾತಕ ಹಾಗೂ ಸ್ನಾತಕೋತ್ತರ ಅಧ್ಯಾಪಕರುಗಳಿಗೆ ನೀಡಿರುವುದಕ್ಕೆ ಅಧ್ಯಾಪಕರ ಸಂಘದ ವತಿಯಿಂದ ವಂದನೆಗಳನ್ನರ್ಪಿಸಿದರು. ಹಾಗೆಯೇ, ಮೈಸೂರು ವಿಶ್ವವಿದ್ಯಾನಿಲಯದ ಮಾನ್ಯ ಕುಲಪತಿಗಳಾದ ಪ್ರೊ. ಜಿ.ಹೇಮಂತ್‌ಕುಮಾರ್ ಅವರನ್ನು ನವದೆಹಲಿಯ ಸಿಇಸಿ ಆಡಳಿತ ಮಂಡಳಿ ಸದಸ್ಯರನ್ನಾಗಿ ನೇಮಕ ಮಾಡಿರುವುದಕ್ಕೆ ಮತ್ತು ಮಾನ್ಯ ಕುಲಸಚಿವರಾದ ಪ್ರೊ.ಆರ್.ಶಿವಪ್ಪ ಅವರನ್ನು ಜನಸ್ನೇಹಿ ಸಂಘಟನೆಯ ದಶಮಾನೋತ್ಸವ ಸಂಭ್ರಮದ ಅಂಗವಾಗಿ ಕಲ್ಯಾಣ ಕರ್ನಾಟಕ ರತ್ನ ರಾಜ್ಯ ಪ್ರಶಸ್ತಿಯನ್ನು ಪಡೆದಿರುವುದಕ್ಕೆ ಮೈಸೂರು ವಿಶ್ವವಿದ್ಯಾನಿಲಯದ ಅಧ್ಯಾಪಕರುಗಳ ಸಂಘ ಹಾಗೂ ಸಿಂಡಿಕೇಟ್ ಸದಸ್ಯರುಗಳ ಪರವಾಗಿ ಧನ್ಯವಾದಗಳನ್ನು ಅರ್ಪಿಸುವ ಮೂಲಕ ಸಭೆಯು ಮುಕ್ತಾಯವಾಯಿತು.

ಕುಲಸಚಿವರು ಮತ್ತು ಸದಸ್ಯ ಕಾರ್ಯದರ್ಶಿ

ಕುಲಪತಿಗಳು ಮತ್ತು ಅಧ್ಯಕ್ಷರು